ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಕನ್ನಡ ಮಾಸಪತ್ರಿಕೆ

# ಸಹಕಾರ

ಮಾಸಪತ್ರಿಕೆ

ಸಂಪುಟ : 8 । ಸಂಚಿಕೆ : 2 । ಫೆಬ್ರವರಿ 2026 । ಪುಟಗಳು : 20 । ಬೆಲೆ : 25/-

ಕರ್ನಾಟಕ ರಾಜ್ಯ
ಸಹಕಾರ ಪತ್ತಿನ ಸಂಘಗಳ
ಮಹಾಮಂಡಳದ ಪ್ರಕಟಣೆ

## ಸಮಸ್ತ ಸಹಕಾರಿ ಬಂಧುಗಳಿಗೆ ಮಹಾ ಶಿವರಾತ್ರಿಯ ಶುಭಾಶಯಗಳು



**ಎಸ್. ಚಂದ್ರಶೇಖರ್**
ಅಧ್ಯಕ್ಷರು

**ಧರೇಪ್ಪ ಎಂ. ಆಲಗೂರ**
ಉಪಾಧ್ಯಕ್ಷರು

ಅಧ್ಯಕ್ಷರು, ಉಪಾಧ್ಯಕ್ಷರು, ಆಡಳಿತಮಂಡಳಿ ನಿರ್ದೇಶಕರುಗಳು
ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ. ಬೆಂಗಳೂರು

## 2026-27ರ ಕೇಂದ್ರ ಬಜೆಟ್ – ಗಾತ್ರ ರೂ. 53,47,315 ಕೋಟಿ



ತೆಂಗು ಬೆಳೆದಾರರಿಗೆ ಆದ್ಯತೆ
ಮಹಿಳಾ 'ಶೀ' ಮಾರ್ಚ್ ಯೋಜನೆ ಆರಂಭ
ರಕ್ಷಣೆ, ಶಿಕ್ಷಣ-ಆರೋಗ್ಯ ವಲಯಕ್ಕೆ ಒತ್ತು
ಕೃಷಿಗೆ 1.62 ಲಕ್ಷ ಕೋಟಿ ರೂ.




ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಅಧ್ಯಕ್ಷರು ಹಾಗೂ ಕರ್ನಾಟಕ ರಾಜ್ಯ ಲಿಕ್ಕರ್ ಮರ್ಚೆಂಟ್ಸ್ ಡೆವಲಪ್‌ಮೆಂಟ್ ಕೋ–ಆಪರೇಟಿವ್ ಸೊಸೈಟಿಯ ಅಧ್ಯಕ್ಷರಾದ ಎಸ್. ಚಂದ್ರಶೇಖರ್‌ರವರು ಅಬಕಾರಿ ಸಚಿವರಾದ ಆರ್.ಬಿ. ತಿಮ್ಮಾಪುರರವರು ಮೈಸೂರಿಗೆ ಆಗಮಿಸಿದಾಗ ಸ್ವಾಗತ ಕೋರಿದರು. ಈ ಸಂದರ್ಭದಲ್ಲಿ ಸೊಸೈಟಿಯ ನಿರ್ದೇಶಕರುಗಳಾದ ಕೆ.ಹನುಮಂತಗೌಡ ಜಿ.ಆರ್. ಚೆನ್ನಕೇಶವ ಪಿ. ಗೋವಿಂದರಾಜ್ ಹಾಗೂ ಎನ್. ಮಂಜುನಾಥ್ ರವರು ಹಾಜರಿದ್ದರು.



**ಬಾಗಲಕೋಟೆ :** ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ಹಾಗೂ ಜಿಲ್ಲಾ ಸಹಕಾರ ಯೂನಿಯನ್, ಬಾಗಲಕೋಟೆ ಇವರ ಸಂಯುಕ್ತ ಆಶ್ರಯದಲ್ಲಿ ಬಾಗಲಕೋಟೆ ಜಿಲ್ಲೆಯ ಪತ್ತಿನ ಸಹಕಾರ ಸಂಘಗಳ ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ಶೈಕ್ಷಣಿಕ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ಪತ್ತಿನ ಮಹಾಮಂಡಳದ ಉಪಾಧ್ಯಕ್ಷರಾದ ಧರೆಪ್ಪ ಮಹದೇವ ಆಲಗೂರವರು ಹಾಗೂ ನಿರ್ದೇಶಕರುಗಳಾದ ಹೊನ್ನಯ ವೀ ಹಿರೇಮಠ, ರವೀಂದ್ರ ಪ್ರಲ್ಹಾದ ಕಲಬುರ್ಗಿ ಹಾಗೂ ಶಿವಕುಮಾರ ಬಸವರಾಜು ಬಾದವಾಡಗಿರವರು ಭಾಗವಹಿಸಿದ್ದರು.

# ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು

## ಆಡಳಿತ ಮಂಡಳಿ



ಶಿದ್ದನಗೌಡ ಸಂಣರಾಮನಗೌಡ ಪಾಟೀಲ
ಸಹಕಾರಿ ಪಿತಾಮಹ



ಶ್ರೀ ಬಿ.ಎಲ್. ಲಕ್ಕೇಗೌಡರು
ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಸಂಸ್ಥಾಪಕ ಅಧ್ಯಕ್ಷರು



ಎಸ್. ಚಂದ್ರಶೇಖರ್
ಅಧ್ಯಕ್ಷರು



ಧರೇಪ್ಪ ಎಂ. ಆಲಗೂರ
ಉಪಾಧ್ಯಕ್ಷರು



ಸಿ.ಎಂ. ಮಾರೇಗೌಡ
ನಿರ್ದೇಶಕರು



ಡಾ. ಬಿ.ಡಿ. ಭೂಕಾಂತ
ನಿರ್ದೇಶಕರು



ಡಾ. ಸಂಜಯ ಪಂ. ಹೊಸಮಠ
ನಿರ್ದೇಶಕರು



ಕೆ.ಕೆ. ಮಹೇಂದ್ರ ಪ್ರಸಾದ್‌ಗೌಡ
ನಿರ್ದೇಶಕರು



ಎಂ.ಜೆ. ನರೇಂದ್ರಕುಮಾರ
ನಿರ್ದೇಶಕರು



ಕೆ. ಕೃಷ್ಣಮೂರ್ತಿ
ನಿರ್ದೇಶಕರು



ಜಿ. ಮಲ್ಲಿಕಾರ್ಜುನಯ್ಯ
ನಿರ್ದೇಶಕರು



ತಮ್ಮಣ್ಣ ಬಿ. ಕೆಂಚರಡ್ಡಿ
ನಿರ್ದೇಶಕರು



ಹೊನ್ನಯ್ಯ ವಿ. ಹಿರೇಮಠ
ನಿರ್ದೇಶಕರು



ಉಮೇಶ ಶಿ. ಬಾಳಿ
ನಿರ್ದೇಶಕರು



ರವೀಂದ್ರ ಪ್ರಲ್ಹಾದ ಕಲಬುರ್ಗಿ
ನಿರ್ದೇಶಕರು



ಡಾ. ನಾಗೇಂದ್ರ ಡಿ.ಎಲ್.
ನಿರ್ದೇಶಕರು



ವೈ. ಶ್ರೀನಿವಾಸಗೌಡ
ನಿರ್ದೇಶಕರು



ಕೆ. ಜಗದೀಶ ಕಂದಿಕೆರೆ
ನಿರ್ದೇಶಕರು



ರಾಜೇಶ್ ಟಿ.
ನಿರ್ದೇಶಕರು



ಶಿವಕುಮಾರ ಬಸವರಾಜು ಬಾದವಾಡಗಿ
ನಿರ್ದೇಶಕರು



ಶಿವಾನಂದ ಬಸಪ್ಪ ನ್ಯಾಮಗೌಡ
ನಿರ್ದೇಶಕರು



ಹೆಚ್. ಅಶೋಕ್
ನಿರ್ದೇಶಕರು




ಚಂದ್ರಶೇಖರ್ ಕೋಲ್ಹಾರು
ನಿರ್ದೇಶಕರು



ಪ್ರಜ್ವಲ್ ಕೆ.ಎನ್.
ಮುಖ್ಯಕಾರ್ಯನಿರ್ವಹಣಾಧಿಕಾರಿ


**SAHAKARA VARTHA PATHRIKE KANNADA MONTHLY**
RNI-Reg No.KARKAN/2018/75796
Post Reg No.KA-BGW/1816/2025-27
Posting Date : 1 and 5 Every Month
Posted at : P/C RMS Bhavan, Bangalore PSO,
Blore-26 Published On : 31st of Previous Month
License to post without prepayment
PMG BG/WPP-405/2025-27




ಇಂದ : ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿಯಮಿತ
ಬೆಂಗಳೂರು ನಂ. 126 1ನೇ ಮುಖ್ಯರಸ್ತೆ, 2ನೇ ಅಡ್ಡರಸ್ತೆ, ಜೆಬಿ ಕಾವಲ್,
ರಾಜೀವ್‌ಗಾಂಧಿ ನಗರ, ನಂದಿನಿ ಲೇಔಟ್, ಬೆಂಗಳೂರು–560096

**Printed at : Biligiri Printers**
**Chamrajpet, Bengaluru - 18**

## ಸಂಪಾದಕೀಯ



ಎಸ್. ಚಂದ್ರಶೇಖರ್
ಅಧ್ಯಕ್ಷರು

**ದೇಶದಲ್ಲಿ ಸಹಕಾರ ಕ್ಷೇತ್ರ 120 ವರ್ಷ ಸೇವೆಯಲ್ಲಿ ಮುಂದುವರೆದಿರುವುದು ಶೋಷಿತರು, ಆರ್ಥಿಕವಾಗಿ ದುರ್ಬಲರಾದ ಜನರ ಏಳಿಗೆಗಾಗಿ ಸಹಕಾರ ಕ್ಷೇತ್ರ ದೇಶದ ಆರ್ಥಿಕತೆಗೆ ತನ್ನದೇ ಆದ ಕೊಡುಗೆ ನೀಡುತ್ತಿದ್ದರೂ ಸಹಕಾರ ವಲಯವನ್ನು ಕಡೆಗಣಿಸಬಾರದೆಂಬುದು ಎಲ್ಲಾ ಸಹಕಾರಿಗಳ ಒತ್ತಾಸೆಯಾಗಿದೆ.**

# ಕೇಂದ್ರ ಬಜೆಟ್-ಸಹಕಾರ ಕ್ಷೇತ್ರಕ್ಕೆ ಪ್ರೋತ್ಸಾಹ ಅಗತ್ಯ

ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ರವರು ಫೆಬ್ರವರಿ – 1 ರಂದು ಕೇಂದ್ರದ 2026–27ನೇ ಸಾಲಿನ ಒಟ್ಟು 53.47 ಲಕ್ಷ ಕೋಟಿ ರೂ.ಗಳ ಗಾತ್ರದ ಆಯವ್ಯಯವನ್ನು ಮಂಡಿಸಿದ್ದಾರೆ.

ದೇಶದ ರಕ್ಷಣೆ, ಶಿಕ್ಷಣ ವ್ಯವಸ್ಥೆ, ಆರೋಗ್ಯ, ಕೃಷಿ, ಸಾರಿಗೆ ಸೇರಿದಂತೆ ಎಲ್ಲಾ ವಲಯಗಳಿಗೆ ಹಣ ಮೀಸಲಿರಿಸಿದ್ದಾರೆ. ದೇಶದ ಜನಸಂಖ್ಯೆಗೆ ಹೋಲಿಸಿದಾಗ ಕೃಷಿಗೆ ನೀಡಿರುವ ಮೊತ್ತ 1.63 ಲಕ್ಷ ಕೋಟಿ ರೂಗಳು ಕಡಿಮೆ ಎನಿಸುತ್ತದೆ.

ಇನ್ನೂ ಸಹಕಾರ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಸಹಕಾರ ಸಂಘಗಳಿಗೆ ಆದಾಯ ತೆರಿಗೆ ವಿನಾಯಿತಿಯನ್ನು ಮುಂದುವರೆಸಿರುವುದನ್ನು ಗಮನಿಸಿದರೆ ಪಟ್ಟಣ ಸಹಕಾರ ಬ್ಯಾಂಕುಗಳಿಗೆ ವಿಧಿಸುತ್ತಿರುವ ಆದಾಯ ತೆರಿಗೆಯ ಪ್ರಮಾಣ ಇಳಿಕೆ ಮಾಡಬೇಕಾದ ಅಗತ್ಯವಿತ್ತು.

ದೇಶದಲ್ಲಿ ಸಹಕಾರ ಕ್ಷೇತ್ರ 120 ವರ್ಷ ಸೇವೆಯಲ್ಲಿ ಮುಂದುವರೆದಿರುವುದು ಶೋಷಿತರು, ಆರ್ಥಿಕವಾಗಿ ದುರ್ಬಲರಾದ ಜನರ ಏಳಿಗೆಗಾಗಿ ಸಹಕಾರ ಕ್ಷೇತ್ರ ದೇಶದ ಆರ್ಥಿಕತೆಗೆ ತನ್ನದೇ ಆದ ಕೊಡುಗೆ ನೀಡುತ್ತಿದ್ದರೂ ಸಹಕಾರ ವಲಯವನ್ನು ಕಡೆಗಣಿಸಬಾರದೆಂಬುದು ಎಲ್ಲಾ ಸಹಕಾರಿಗಳ ಒತ್ತಾಸೆಯಾಗಿದೆ.

ಹೊಸ ಸಹಕಾರ ವಲಯಗಳ ಸೃಷ್ಟಿಗೆ ಸಹಕಾರಿಗಳೇ ಮುಂದಾಗ ಬೇಕಾಗಿದೆ. ಕೌಶಲ್ಯ ಅಭಿವೃದ್ಧಿಯ ಜೊತೆಗೆ ಯುವಜನರಲ್ಲಿ ಸಹಕಾರ ಕ್ಷೇತ್ರದ ಬಗ್ಗೆ ಹೆಚ್ಚು ಅರಿವು ಜಾಗೃತಿ ಮೂಡಿಸಬೇಕಾದ ಅಗತ್ಯವೂ ಇದೆ.

ಸಹಕಾರ ಸಂಸ್ಥೆಗಳ ಅಂಕಿ ಅಂಶಗಳನ್ನು ಅವಲೋಕಿಸಿದಾಗ ಸಂಘಗಳ ಶೇರು ಬಂಡವಾಳ, ಠೇವಣಿಗಳನ್ನು ಸಹಕಾರಿಗಳಿಂದ ಸಂಗ್ರಹಿಸಿ ಕ್ಷೇತ್ರವನ್ನು ಆರ್ಥಿಕವಾಗಿ ಬಲಪಡಿಸಬೇಕಾದ ಅಗತ್ಯವೂ ಇದೆ. ಈ ನಿಟ್ಟಿನಲ್ಲಿ ಸಹಕಾರಿಗಳು ಬದ್ಧತೆಯೊಂದಿಗೆ ಹೊಸ ಚಿಂತನೆ –ಯೋಜನೆಗಳೊಂದಿಗೆ ಸಹಕಾರ ಸಂಸ್ಥೆಗಳ ಬೆಳವಣಿಗೆಗೆ ಹೆಚ್ಚು ತೊಡಗಿಸಿಕೊಳ್ಳಬೇಕಾದ ಅಗತ್ಯತೆಯು ಇಂದು ಪ್ರಸ್ತುತ ಸನ್ನಿವೇಶದಲ್ಲಿ ಮಹತ್ವವನ್ನು ಪಡೆಯುತ್ತದೆ.

ಸಹಕಾರ ಸಂಸ್ಥೆಗಳು ಪರಿಣಾಮಕಾರಿಯಾಗಿ ನಿಸ್ವಾರ್ಥತೆಯಿಂದ ಮುನ್ನಡೆಯಲು ದಕ್ಷ ಅಧಿಕಾರಿಗಳು/ಸಿಬ್ಬಂದಿಗಳ ಸೇವೆ ಪಡೆಯುವುದಲ್ಲದೆ, ಸೇವೆಗಳನ್ನು ಪರಿಣಾಮಕಾರಿಗೊಳಿಸಲು ಸಾಧ್ಯವಿದೆ. ಜೊತೆಗೆ ಹೊಸ ಬಗೆಯ ಹಾಗೂ ಅಗತ್ಯವಿರುವೆಡೆ ಸಹಕಾರ ಸಂಘಗಳನ್ನು ಸ್ಥಾಪಿಸುವುದರಿಂದ ಸಹಕಾರ ಕ್ಷೇತ್ರ ಉದ್ಯೋಗ ಸೃಷ್ಟಿಗೆ ಕಾರಣವಾಗುತ್ತದೆ.

ಸಂಸ್ಕರಣೆ, ರೂಪಾಂತರ ಕ್ಷೇತ್ರದಲ್ಲಿ ಸಾಕಷ್ಟು ಅವಕಾಶಗಳಿವೆ. ಅವುಗಳ ಸದ್ಬಳಕೆಗೆ ಸಹಕಾರ ಸಂಸ್ಥೆಗಳು ದೂರ ದೃಷ್ಟಿ ಚಿಂತನೆಗಳೊಂದಿಗೆ ಮುನ್ನಡೆಯಲಿ ಎಂದು ಆಶಿಸೋಣ.

ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಏಕಮಾತ್ರ ಕನ್ನಡ ಮಾಸಪತ್ರಿಕೆ

ಸಹಕಾರ

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಪ್ರಕಟಣೆ

ಸಂಪಾದಕ ಮಂಡಳಿ

ಅಧ್ಯಕ್ಷರು / ಪ್ರಧಾನ ಸಂಪಾದಕರು :

**ಶ್ರೀ ಎಸ್. ಚಂದ್ರಶೇಖರ್**

ಉಪಾಧ್ಯಕ್ಷರು / ಕಾರ್ಯನಿರ್ವಾಹಕ ಸಂಪಾದಕರು

**ಶ್ರೀ ಧರೆಪ್ಪ ಮಹದೇವ ಆಲಗೂರ,**

ಸಂಪಾದಕರು :

**ಪ್ರಜ್ವಲ್ ಕೆ.ಎನ್.** ಮುಖ್ಯಕಾರ್ಯನಿರ್ವಹಣಾಧಿಕಾರಿ

**ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು**

ನಂ. 126, 1ನೇ ಮುಖ್ಯರಸ್ತೆ, 2ನೇ ಅಡ್ಡರಸ್ತೆ ಜೆಬಿ ಕಾವಲ್, ರಾಜೀವ್‌ಗಾಂಧಿ ನಗರ, ನಂದಿನಿ ಲೇಔಟ್, ಬೆಂಗಳೂರು–560096
ದೂರವಾಣಿ ಸಂಖ್ಯೆ : 080–23564444 / 23464033 / 23464034
ಇ–ಮೇಲ್ : info@ksccsf.org, ksccsfltd@gmail.com, ವೆಬ್ : www.ksccsf.org

## "ಅಧ್ಯಯನದಿಂದ ಶಕ್ತಿ – ಸಹಕಾರದಿಂದ ಪ್ರಗತಿ" : ಡಾ. ಸಂಜಯ ಪಂ ಹೊಸಮಠ

**ಹಾವೇರಿ :** ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ, ಹಾವೇರಿ ಜಿಲ್ಲಾ ಸಹಕಾರ ಯೂನಿಯನ್ ಹಾಗೂ ಸಹಕಾರ ಇಲಾಖೆ, ಸಂಯುಕ್ತ ಆಶ್ರಯದಲ್ಲಿ ಬೆಳಗಾವಿ ವಿಭಾಗದ ಆಯ್ದ ಪತ್ತಿನ ಸಹಕಾರ ಸಂಘಗಳ ಪದಾಧಿಕಾರಿಗಳು ಹಾಗೂ ಹಿರಿಯ ಅಧಿಕಾರಿಗಳಿಗೆ ಹಾವೇರಿಯ ಶಿವಾ ರೆಸಿಡೆನ್ಸಿಯಲ್ಲಿ ಒಂದು ದಿನದ ರಾಜ್ಯ ಮಟ್ಟದ ವಿಶೇಷ ಸಹಕಾರ ತರಬೇತಿ ಕಾರ್ಯಕ್ರಮ ಯಶಸ್ವಿಯಾಗಿ ಜರುಗಿತು.

2025–International Year of Cooperatives ಅಂಗವಾಗಿ "ಸಹಕಾರಂ ಗೆಲ್ಗೆ–ಸಹಕಾರಂ ಬಾಳ್ಗೆ" ಎಂಬ ಘೋಷ ವಾಕ್ಯದಡಿ ಆಯೋಜಿಸಲಾದ ಶಿಬಿರವನ್ನು ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ನಿರ್ದೇಶಕರಾದ ಬಸವರಾಜ್ ಅರಬಗೊಂಡ ಉದ್ಘಾಟಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಹಾವೇರಿ ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷರಾದ ಶಿವಾನಂದ ಸಂಗಾಪುರ್ ವಹಿಸಿದ್ದರು.

ಈ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ನಿರ್ದೇಶಕರಾದ ಡಾ. ಸಂಜಯ ಪಿ. ಹೊಸಮಠ, ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ ಸಹಕಾರ ಕ್ಷೇತ್ರದಲ್ಲಿ ನಿರಂತರ ಅಧ್ಯಯನ, ತರಬೇತಿ ಹಾಗೂ ಅನುಭವ ವಿನಿಮಯ ಅತ್ಯಗತ್ಯ ಎಂದು ಹೇಳಿದರು.

ಪತ್ತಿನ ಸಹಕಾರ ಸಂಘಗಳ ಸಿಬ್ಬಂದಿ ಮತ್ತು ಆಡಳಿತ ಮಂಡಳಿಯವರು ಪ್ರತಿವರ್ಷವೂ ನೆರೆ ರಾಜ್ಯಗಳಿಗೆ, ವಿಶೇಷವಾಗಿ ಮಹಾರಾಷ್ಟ್ರಕ್ಕೆ ಅಧ್ಯಯನ ಪ್ರವಾಸಗಳನ್ನು ಕೈಗೊಳ್ಳಬೇಕು. ಮಹಾರಾಷ್ಟ್ರದ ಪತ್ತಿನ ಸಹಕಾರ ಸಂಘಗಳು ದೇಶದಲ್ಲಿಯೇ ಉನ್ನತ ಮಟ್ಟದ ಕಾರ್ಯಕ್ಷಮತೆಯನ್ನು ತೋರಿಸುತ್ತಿರುವುದರಿಂದ, ಅವರ ಕಾರ್ಯಪದ್ಧತಿಗಳನ್ನು ಅಧ್ಯಯನ ಮಾಡಿ ಕರ್ನಾಟಕದಲ್ಲಿಯೂ ಅನುಸರಿಸಿದರೆ ನಮ್ಮ ಸಹಕಾರ ಚಳವಳಿ



ಇನ್ನಷ್ಟು ಸದೃಢವಾಗುತ್ತದೆ ಎಂದು ಸಲಹೆ ನೀಡಿದರು.

ಇದಲ್ಲದೆ ರಾಜ್ಯದ ಇತರ ಜಿಲ್ಲೆಗಳಲ್ಲಿರುವ ಯಶಸ್ವಿ ಪತ್ತಿನ ಸಹಕಾರ ಸಂಘಗಳಿಗೆ ಭೇಟಿ ನೀಡಿ, ಅಲ್ಲಿನ ಉತ್ತಮ ಆಡಳಿತ, ಹಣಕಾಸು ಶಿಸ್ತು ಮತ್ತು ಗ್ರಾಹಕ ಸೇವಾ ಮಾದರಿಗಳನ್ನು ತಮ್ಮ ಸಂಘಗಳಲ್ಲಿ ಅಳವಡಿಸಿಕೊಂಡರೆ ಸಂಘಗಳ ಅಭಿವೃದ್ಧಿಗೆ ಮಹತ್ತರ ಸಹಕಾರವಾಗುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ದಿನಪೂರ್ತಿ ವಿವಿಧ ಸಂಪನ್ಮೂಲ ವ್ಯಕ್ತಿಗಳಿಂದ ಗ್ರಾಹಕ ಸೇವೆ ಮತ್ತು ಪರಿಣಾಮಕಾರಿ ಸಂವಹನ, ಸೈಬರ್ ಕ್ರೈಂ ಜಾಗೃತಿ, ಒತ್ತಡ ನಿರ್ವಹಣೆ ಹಾಗೂ ವ್ಯಕ್ತಿತ್ವ ವಿಕಸನ ಕುರಿತು ಉಪಯುಕ್ತ ಉಪನ್ಯಾಸಗಳು ನಡೆದವು. ಸಹಕಾರ ಕ್ಷೇತ್ರದ ಆಧುನಿಕ ಸವಾಲುಗಳು ಮತ್ತು ಅವುಗಳಿಗೆ ಪರಿಹಾರಗಳ ಬಗ್ಗೆ ಭಾಗವಹಿಸಿದವರಿಗೆ ಸಮಗ್ರ ಅರಿವು ಮೂಡಿಸಲಾಯಿತು. ಹಾವೇರಿ ಜಿಲ್ಲೆಯ ಹಾಗೂ ಬೆಳಗಾವಿ ವಿಭಾಗದ ಅನೇಕ ಪತ್ತಿನ ಸಹಕಾರ ಸಂಘಗಳ ಪ್ರತಿನಿಧಿಗಳು ಈ ಶಿಬಿರದಲ್ಲಿ ಭಾಗವಹಿಸಿ ತರಬೇತಿಯನ್ನು ಅತ್ಯಂತ ಉಪಯುಕ್ತವೆಂದು ಅಭಿಪ್ರಾಯಪಟ್ಟರು.

ಸಹಕಾರ ವಾರ್ತಾ ಪತ್ರಿಕೆ ಚಂದಾದಾರರಾಗ ಬಯಸುವವರು ಚಂದಾ ಹಣವನ್ನು "ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು" ಇವರ ಹೆಸರಿಗೆ ಚೆಕ್ ಅಥವಾ ಡಿಡಿಯನ್ನು ಬರೆದು ಕಳುಹಿಸಬೇಕಾಗಿ ವಿನಂತಿ. - ಸಿ.ಇ.ಓ.
ಐದು ವರ್ಷಗಳ ಚಂದಾ: ರೂ : 1770/-

ಸೂಚನೆ :
ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅನಿಸಿಕೆ, ಅಭಿಪ್ರಾಯಗಳು ಆಯಾ ಬರಹಗಾರರದೇ ಆಗಿರುತ್ತದೆ ವಿನಃ ಪತ್ರಿಕೆ / ಮಹಾಮಂಡಳದ ವಿಚಾರಗಳಾಗಿರುವುದಿಲ್ಲ. - ಸಂಪಾದಕರು, ಸಹಕಾರ ವಾರ್ತಾ ಪತ್ರಿಕೆ.

# 2026-27ರ ಕೇಂದ್ರ ಬಜೆಟ್ ಗಾತ್ರ 53.47 ಲಕ್ಷ ಕೋಟಿ ರೂ.

## ರಕ್ಷಣೆ, ಆರೋಗ್ಯ, ಶಿಕ್ಷಣ, ಕೃಷಿಗೆ ಒತ್ತು : ನಿರ್ಮಲಾ ಸೀತಾರಾಮನ್




**ನವದೆಹಲಿ :** ಕೇಂದ್ರ ಸರ್ಕಾರದ 2026-27ನೇ ಸಾಲಿನ 53.47 ಲಕ್ಷ ಕೋಟಿ ರೂ.ಗಳ ಗಾತ್ರದ ಆಯವ್ಯಯವನ್ನು ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಲೋಕಸಭೆಯಲ್ಲಿ ಮಂಡಿಸಿದ್ದಾರೆ.

ವಿಕಸಿತ ಭಾರತ 2047ರ ದೂರದೃಷ್ಟಿ ಚಿಂತನೆಯೊಂದಿಗೆ ದೇಶದ ಆರ್ಥಿಕ ಪರಿಸ್ಥಿತಿಯನ್ನು ಗಮನದಲ್ಲಿರಿಸಿಕೊಂಡು ಹಣಕಾಸು ಆರ್ಥಿಕ ಶಿಸ್ತು, ಸ್ಥಿರತೆ ಕಾಪಾಡುವ, ಸಮತೋಲನ ಧ್ಯೇಯದ 2026-27ನೇ ಸಾಲಿನ ಮುಂಗಡ ಪತ್ರದಲ್ಲಿ ಹಣಕಾಸು ಇಲಾಖೆಗೆ ರೂ.19.72 ಲಕ್ಷ ಕೋಟಿ, ರಕ್ಷಣಾ ಇಲಾಖೆಗೆ ರೂ.7.8 ಲಕ್ಷ ಕೋಟಿ, ರಸ್ತೆ ಸಾರಿಗೆ, ರೈಲ್ವೆ, ಕೃಷಿ, ಶಿಕ್ಷಣ ಕ್ಷೇತ್ರಗಳಿಗೆ ಆದ್ಯತೆ ನೀಡಿದ್ದಾರೆ.

ಅಪಘಾತ ವಿಮೆ ಪರಿಹಾರಕ್ಕೆ ಜಿಎಸ್‌ಟಿ ವಿನಾಯಿತಿ, ಕೃಷಿಯಲ್ಲಿ ಎಐ ಕ್ರಾಂತಿ, ಮಹಿಳಾ ಉದ್ದಿಮೆಗಳಿಗೆ ಶೀಮಾರ್ಟ್, ಜಿಲ್ಲೆಗೊಂದು ಬಾಲಕಿಯರ ಹಾಸ್ಟಲ್, ಶಿಕ್ಷಣ ಮತ್ತು ಕೌಶಲ್ಯಕ್ಕೆ ಹೆಚ್ಚಿನ ಒತ್ತನ್ನು ನಿರ್ಮಲಾ ಸೀತಾರಾಮನ್ ಅವರು ಈ ಬಾರಿಯ ಬಜೆಟ್‌ನಲ್ಲಿ ನೀಡಿದ್ದಾರೆ.

### ರೈತಸ್ನೇಹಿಯಾಗಲಿವೆ ವಾಣಿಜ್ಯ ಬೆಳೆಗಳು

ದೇಶದಲ್ಲಿ ಸಣ್ಣ ಹಾಗೂ ಅತಿಸಣ್ಣ ರೈತರ ಸಂಖ್ಯೆ ಹೆಚ್ಚಿದ್ದು ಇಂತಹ ಕೃಷಿಕರಿಗೆ ಆದಾಯ ವೃದ್ಧಿಸಿಕೊಳ್ಳಲು "ಅಧಿಕ ಮೌಲ್ಯದ ಕೃಷಿ'ಗೆ ಒತ್ತು ನೀಡುವ ಹೊಸ ಪ್ರಸ್ತಾಪವು ಕೇಂದ್ರ ಬಜೆಟ್‌ನಲ್ಲಿ ಪ್ರಕಟಿಸಲಾಗಿದೆ. ಜೊತೆಗೆ ತೆಂಗು, ಗೋಡಂಬಿ, ಬಾದಾಮಿ, ಕೋಕೋ ಬೆಳೆಗಳನ್ನು




ಉತ್ತೇಜಿಸಿ ವಿಶೇಷ ಕಾರ್ಯಕ್ರಮವನ್ನು ರೂಪಿಸುವ ಮೂಲಕ ರೈತರ ಕಲ್ಯಾಣಕ್ಕೆ ವಿಶೇಷ ಕಾಳಜಿ ವಹಿಸಲಾಗಿದೆ. ಈವರೆಗೂ ಭತ್ತ, ಗೋಧಿ ಸೇರಿ ಸಾಂಪ್ರದಾಯಿಕ ಬೆಳೆಗಳನ್ನು ಮಾತ್ರ ಕೇಂದ್ರೀಕರಿಸಿರುವ ರೈತರು, ಇನ್ನು ಮುಂದೆ ಹೆಚ್ಚು ಆದಾಯವನ್ನು ತಂದುಕೊಡುವ ಬೆಳೆಗಳಲ್ಲಿ ತೊಡಗಿಸಿಕೊಳ್ಳಲು ಕೆಲಕಾರ್ಯಕ್ರಮಗಳನ್ನು ಪ್ರಕಟಿಸಲಾಗಿದೆ.

ಕೃಷಿ ಉತ್ಪನ್ನಗಳನ್ನು ವೈವಿಧ್ಯಗೊಳಿಸಿ ಉತ್ಪಾದಕತೆಯನ್ನು

ಅಧಿಕಗೊಳಿಸುವುದು ಹಾಗೂ ರೈತರ ಆದಾಯವನ್ನು ಇನ್ನಷ್ಟು ಹೆಚ್ಚಳ ಮಾಡಲು ತೆಂಗು ಹಾಗೂ ಶ್ರೀಗಂಧ ಬೆಳೆಯನ್ನು ಹೆಚ್ಚಾಗಿ ಪ್ರೋತ್ಸಾಹಿಸಲು ನಿರ್ಧರಿಸಲಾಗಿದೆ. ಅಧಿಕ ಪ್ರಮಾಣದ ಮೌಲ್ಯವರ್ಧನೆಗೆ ಅವಕಾಶವಿರುವ ಈ ಎರಡೂ ಬೆಳೆಗಳು ರೈತರಿಗೆ ವರದಾನವಾಗಿದೆ. ಪ್ರಾಕೃತಿಕ ವಿಪತ್ತಿನ ಮಧ್ಯೆಯೂ ಲಾಭ ತಂದುಕೊಡುವ ಈ ಬೆಳೆಗಳು ಅನ್ನದಾತರ ಕೈಹಿಡಿಯಲಿವೆ.

**ಕರಾವಳಿ ರಾಜ್ಯಗಳಿಗೆ ಹೆಚ್ಚಿನ ಲಾಭ :** ವಿಶೇಷವಾಗಿ ಕರ್ನಾಟಕ ಸೇರಿ ಕರಾವಳಿ ಪ್ರದೇಶ ಹೊಂದಿರುವ 9 ರಾಜ್ಯಗಳಲ್ಲಿ ತೆಂಗು ಬೆಳೆ ಅತ್ಯಧಿಕ ಪ್ರಮಾಣದಲ್ಲಿ ಬೆಳೆಯಲಾಗುತ್ತಿದೆ. ದೊಡ್ಡಸಂಖ್ಯೆಯಲ್ಲಿ ಉದ್ಯೋಗಾವಕಾಶ ಕಲ್ಪಿಸುವ ಕಲ್ಪವೃಕ್ಷದ ಕೃಷಿ ರೈತರಿಗೆ ಲಾಭಾದಾಯಕವಾಗಿ ಪರಿಣಮಿಸಿದೆ. ಇದರ ಜತೆಗೆ ಗೋಡಂಬಿ, ಶ್ರೀಗಂಧ, ಬಾದಾಮಿ ಬೆಳೆಗೆ ಹೊಸ ಮಾರುಕಟ್ಟೆ ಸೃಷ್ಟಿಸಲು ವೇದಿಕೆ ಕಲ್ಪಿಸಲಾಗಿದೆ. ಹೆಚ್ಚಿನ ಮೌಲ್ಯದ ಕೃಷಿ ಕೈಗೊಳ್ಳುವವರಿಗೆ ನೆರವಾಗಲು ಸರ್ಕಾರ ಪ್ರತ್ಯೇಕ ಅನುದಾನವನ್ನು ಮೀಸಲಿಡುವ ಘೋಷಣೆ ಮಾಡಿದೆ. ಈಶಾನ್ಯ ರಾಜ್ಯಗಳಲ್ಲಿ ಅಗರ್ ಮರಗಳು ಹಾಗೂ ಗಿರಿಪ್ರದೇಶಗಳಲ್ಲಿ ಬಾದಾಮಿ, ವಾಲ್ನಟ್ಸ್ ಮತ್ತು ಪೈನ್ ಬೀಜಗಳ ಬೆಳೆಗಳನ್ನು ಬೆಂಬಲಿಸುವ ಮೂಲಕ ದೊಡ್ಡ ಸಂಖ್ಯೆಯಲ್ಲಿ ಕೃಷಿಕರಿಗೆ ಉತ್ತೇಜನ ನೀಡುವ ಸಂಕಲ್ಪ ಕೈಗೊಳ್ಳಲಾಗಿದೆ.


**ಸಹಕಾರ ಸಂಘಗಳಿಗೆ ತೆರಿಗೆಯಲ್ಲಿ ವಿನಾಯಿತಿ :** ಪಶು ಆಹಾರ ಮತ್ತು ಬೀಜಗಳನ್ನು ಪೂರೈಕೆ ಮಾಡುವ ಸಹಕಾರ ಸಂಸ್ಥೆಗಳಿಗೆ ಕೇಂದ್ರ ಬಜೆಟ್‌ನಲ್ಲಿ ತೆರಿಗೆ ವಿನಾಯಿತಿ ಘೋಷಿಸಲಾಗಿದೆ.

ಹಾಲು, ಎಣ್ಣೆಕಾಳು, ಹಣ್ಣು ಅಥವಾ ತರಕಾರಿಗಳನ್ನು ಕೇಂದ್ರೀಯ ಸಹಕಾರ ಸಂಘಗಳಿಗೆ ಮತ್ತು ಇಂಥದ್ದೇ ಚಟುವಟಿಕೆಯಲ್ಲಿ ತೊಡಗಿರುವಂತಹವರಿಗೆ ಪೂರೈಕೆ ಮಾಡುವ ಪ್ರಾಥಮಿಕ ಪತ್ತಿನ ಸಹಕಾರ ಸೊಸೈಟಿಗಳ ಸದಸ್ಯರುಗೂ ಈ ವಿನಾಯಿತಿ ಲಾಭ ಸಿಗಲಿದೆ.

"ಅಂತಹ ಸಹಕಾರ ಸಂಘಗಳ ಲಾಭಾಂಶಕ್ಕೂ ಹೊಸ ತೆರಿಗೆ ಪದ್ಧತಿ ಅನ್ವಯ ತೆರಿಗೆ ವಿನಾಯಿತಿ ದೊರೆಯಲಿದ್ದು ಆ ಮೂಲಕ ಇದು ಸದಸ್ಯರನ್ನು ತಲುಪಲಿದೆ. ಬೇರೆ ಸಹಕಾರ ಸಂಘದಿಂದ ಲಾಭಾಂಶ ಸ್ವೀಕರಿಸುವ ಸಹಕಾರ ಸಂಘಕ್ಕೆ ಹಳೆ ತೆರಿಗೆ ಪದ್ಧತಿಯಲ್ಲಿ ತೆರಿಗೆ ವಿನಾಯಿತಿ ಇತ್ತು. ಇದನ್ನುಹೊಸ ತೆರಿಗೆ ಪದ್ಧತಿಯಲ್ಲೂ ಮುಂದುವರಿಸದಿದ್ದರೆ ದ್ವಿತರಿಗೆಗೆ ದಾರಿಯಾಗುತ್ತಿತ್ತು. ಇದು. ಸಹಕಾರ ಸಂಘಗಳ ಸದಸ್ಯರಿಗೂ ಹೊರೆ ಆಗುತ್ತಿತ್ತು" ಎಂದು ನಿರ್ಮಲಾ ಸೀತಾರಾಮನ್ ಅಭಿಪ್ರಾಯಪಟ್ಟಿದ್ದಾರೆ.

ಮಾನ್ಯತೆ ಪಡೆದ ರಾಷ್ಟ್ರೀಯ ಸಹಕಾರ ಒಕ್ಕೂಟಗಳು ತಮ್ಮ ಲಾಭಾಂಶವನ್ನಾಗಿ ಪರಿವರ್ತಿಸಲು ವಿವಿಧ ಕಂಪನಿಗಳಲ್ಲಿ 2026ರ ಜನವರಿ 31ರವರೆಗೆ ಹೂಡಿಕೆ ಮಾಡಿದ್ದರೆ ಅಂತಹ ಹೂಡಿಕೆಗಳಿಗೆ ಮೂರುವರ್ಷಗಳವರೆಗೆ ತೆರಿಗೆ ವಿನಾಯಿತಿಯನ್ನು ಬಜೆಟ್‌ನಲ್ಲಿ ಘೋಷಿಸಲಾಗಿದೆ. ಈ ರೀತಿ ಹೂಡಿಕೆಗಳು ಲಾಭಾಂಶವಾಗಿ ಸದಸ್ಯರಿಗೆ ದೊರೆಯುವ ಕಾರಣ ತೆರಿಗೆ ವಿನಾಯಿತಿ ನೀಡಲಾಗಿದೆ.

ಸಹಕಾರ ಸಂಘಗಳ ಆದಾಯ ತೆರಿಗೆಯು ಈ ಹಿಂದಿನಂತೆ 10,000 ರೂ.ವರೆಗೆ ಶೇ. 10,10,001 ರೂ.ನಿಂದ 20,000 ರೂ.ವರೆಗೆ ಶೇ.20 ಮತ್ತು 20,000 ರೂ. ಮೀರಿದ ಆದಾಯಕ್ಕೆ ಶೇ.30ರ ತೆರಿಗೆಯಲ್ಲಿ ಯಾವುದೇ ಬದಲಾವಣೆ ಆಗಿಲ್ಲ.




"ಕೇಂದ್ರ ಬಜೆಟ್ 2026-27 ಸಹಕಾರ ಕ್ಷೇತ್ರಕ್ಕೆ ಅತ್ಯಂತ ಮಹತ್ವದ ಹಾಗೂ ಇತಿಹಾಸಾತ್ಮಕ ಹೆಜ್ಜೆಯಾಗಿದೆ. ಪಶು ಆಹಾರ ಮತ್ತು ಹತ್ತಿ ಬೀಜ ಸಹಕಾರ ಸಂಘಗಳಿಗೆ ತೆರಿಗೆ ಸೌಲಭ್ಯಗಳನ್ನು ವಿಸ್ತರಿಸಿರುವುದು ಹಾಗೂ ಪರಸ್ಪರ ಸಹಕಾರ ಸಂಘಗಳ ಲಾಭಾಂಶಗಳ ಮೇಲಿನ ದ್ವಿತೀಯ ತೆರಿಗೆಯನ್ನು ನಿವಾರಿಸಿರುವುದು ಸಹಕಾರಿ ಸಂಸ್ಥೆಗಳ ಆರ್ಥಿಕ ಸ್ಥಿರತೆಯನ್ನು ಬಲಪಡಿಸುತ್ತದೆ. ಈ ನಿರ್ಣಯಗಳು ಕರ್ನಾಟಕ ರಾಜ್ಯದ ಸಹಕಾರ ಪತ್ತಿನ ಸಂಘಗಳ ಮತ್ತು ರೈತರ ಕೃಷಿ ಆಧಾರಿತ ಸಂಸ್ಥೆಗಳಿಗೆ ಮಹತ್ತರ ಬೆಂಬಲ ನೀಡಲಿವೆ."

**– ಡಾ. ಸಂಜಯ ಪಂಚಾಕ್ಷರಿ**
**ಹೊಸಮಠ, ನಿರ್ದೇಶಕರು, ಕರ್ನಾಟಕ ರಾಜ್ಯ**
**ಸಹಕಾರ ಪತ್ತಿನ ಸಂಘಗಳ ಮಹಾಮಂಡಳ**
**ಬೆಂಗಳೂರು**



# ಕರ್ನಾಟಕ ರಾಜ್ಯ ಮಹಿಳಾ ಸಹಕಾರ ಮಹಾಮಂಡಳದ ಅಧ್ಯಕ್ಷರಾಗಿ ಶಕುಂತಲಾ ಕೆ. ಬೆಲ್ದಾಳೆ ಆಯ್ಕೆ

**ಬೆಂಗಳೂರು:** ಕರ್ನಾಟಕ ರಾಜ್ಯ ಮಹಿಳಾ ಸಹಕಾರ ಮಹಾಮಂಡಳದ ಅಧ್ಯಕ್ಷರಾಗಿ ಶಕುಂತಲಾ ಕೆ. ಬೆಲ್ದಾಳೆ ಹಾಗೂ ಉಪಾಧ್ಯಕ್ಷರಾಗಿ ಶಾಂತಲಾ ಭೂಕಾಂತ್ ಅವರುಗಳು ಆಯ್ಕೆಯಾಗಿದ್ದಾರೆ. ನಿರ್ದೇಶಕರುಗಳಾಗಿ ಕೆ. ಲಲಿತಾ ಜಿ.ಟಿ. ದೇವೇಗೌಡ, ಸಾವಿತ್ರಿ ರೈ, ಚೆನ್ನಮ್ಮ, ಗೀತಾ ಶಂಕರ್, ಕೆ.ಡಿ. ಲೀಲಾವತಿ, ಲಕ್ಷ್ಮಿ, ಎಂ.ವಿ. ಹೇಮಾವತಿ, ಮಂಗಳಾ ವಿಶ್ವೇಶ್ವರಯ್ಯ, ಮಂಜುಳ, ರೇಖಾ ಮಹಾಬಲೇಶ್ವರ ರೈ, ಸಾವಿತ್ರಿ ಬಾಯಿ ಹೆಬ್ಬಾಳೆ, ಶಾಂತಲಾ ಈಶ್ವರ ಸೊರಂಗಾವಿ, ಶೀಲಾ ನಂಜುಂಡಯ್ಯ, ಶಿವಮ್ಮ, ತನುಜಾ ವಿಕ್ರಮ ಅವರುಗಳು ಆಯ್ಕೆಯಾಗಿದ್ದಾರೆ.


ಶಕುಂತಲಾ ಕೆ. ಬೆಲ್ದಾಳೆ
ಅಧ್ಯಕ್ಷರು


ಶಾಂತಲಾ ಭೂಕಾಂತ್
ಉಪಾಧ್ಯಕ್ಷರು


ಕೆ. ಲಲಿತಾ ಜಿ.ಟಿ.
ದೇವೇಗೌಡ, ನಿರ್ದೇಶಕರು


ಸಾವಿತ್ರಿ ರೈ
ನಿರ್ದೇಶಕರು


ಚೆನ್ನಮ್ಮ
ನಿರ್ದೇಶಕರು


ಗೀತಾ ಶಂಕರ್
ನಿರ್ದೇಶಕರು


ಕೆ.ಡಿ. ಲೀಲಾವತಿ
ನಿರ್ದೇಶಕರು


ಲಕ್ಷ್ಮಿ
ನಿರ್ದೇಶಕರು


ಎಂ.ವಿ. ಹೇಮಾವತಿ
ನಿರ್ದೇಶಕರು


ಮಂಗಳಾ ವಿಶ್ವೇಶ್ವರಯ್ಯ
ನಿರ್ದೇಶಕರು


ಮಂಜುಳ
ನಿರ್ದೇಶಕರು


ರೇಖಾ ಮಹಾಬಲೇಶ್ವರ ರೈ
ನಿರ್ದೇಶಕರು


ಸಾವಿತ್ರಿಬಾಯಿ ಹೆಬ್ಬಾಳೆ
ನಿರ್ದೇಶಕರು


ಶಾಂತಲಾ ಈಶ್ವರ
ಸೊರಂಗಾವಿ ನಿರ್ದೇಶಕರು


ಶೀಲಾ ನಂಜುಂಡಯ್ಯ
ನಿರ್ದೇಶಕರು


ಶಿವಮ್ಮ
ನಿರ್ದೇಶಕರು


ತನುಜಾವಿಕ್ರಮ
ನಿರ್ದೇಶಕರು

---



ಪತ್ತಿನ ಮಹಾಮಂಡಳದ ನಿರ್ದೇಶಕರಾದ ರಾಜೇಶ್ ಟಿ.ರವರು ಶ್ರೀ ದೇವರ ದಾಸಿಮಯ್ಯ ಪತ್ತಿನ ಸಹಕಾರ ಸಂಘ ನಿ., ಶಿವಮೊಗ್ಗ ಇದರ ನಿರ್ದೇಶಕರಾಗಿ ಮರು ಆಯ್ಕೆಯಾಗಿರುತ್ತಾರೆ.

# ಸಹಕಾರ ಕ್ಷೇತ್ರಕ್ಕೆ ದಾರಿದೀಪವಾಗಿರುವ ಮಹಾರಾಷ್ಟ್ರದ ಸಾಂಗ್ಲಿ ಜಿಲ್ಲೆಯ ಜೈಸಿಂಗಪೂರಿನ ಕರ್ಮವೀರ ಮಲ್ಟಿಸ್ಟೇಟ್ ಕೋ-ಆಪರೇಟಿವ್ ಕ್ರೆಡಿಟ್ ಸೊಸೈಟಿ




ಸಹಕಾರ ಚಳವಳಿ ಕೇವಲ ಹಣಕಾಸಿನ ವ್ಯವಹಾರಕ್ಕೆ ಸೀಮಿತವಾಗದೆ, ಸಮಾಜದ ಸರ್ವತೋಮುಖ ಅಭಿವೃದ್ಧಿಗೆ ದಿಕ್ಕು ತೋರಿಸಬೇಕು ಎಂಬ ಮೂಲ ತತ್ವವನ್ನು ಜೀವಂತವಾಗಿಟ್ಟುಕೊಂಡಿರುವ ಸಂಸ್ಥೆಗಳ ಪೈಕಿ ಕರ್ನಾಟಕ ಮಹಾರಾಷ್ಟ್ರ ಗಡಿಭಾಗದಲ್ಲಿರುವ (ಆಗಿನ ಮುಂಬೈ ಕರ್ನಾಟಕ ಭಾಗ) ಕರ್ಮವೀರ ಮಲ್ಟಿಸ್ಟೇಟ್ ಕೋ-ಆಪರೇಟಿವ್ ಕ್ರೆಡಿಟ್ ಸೊಸೈಟಿ, ಜೈಸಿಂಗ್‌ಪುರ ಜಿಲ್ಲಾ ಸಾಂಗ್ಲಿ ಮಹಾರಾಷ್ಟ್ರ ಪ್ರಮುಖ ಸ್ಥಾನವನ್ನು ಹೊಂದಿದೆ. 1988ರ ಸೆಪ್ಟೆಂಬರ್ 19ರಂದು ಸ್ಥಾಪನೆಯಾಗಿ, 2013ರ ಏಪ್ರಿಲ್ 4ರಂದು ಮಲ್ಟಿಸ್ಟೇಟ್ ಕೋ-ಆಪರೇಟಿವ್ ಸೊಸೈಟಿಯಾಗಿ ಪರಿವರ್ತನೆಯಾದ ಈ ಸಂಸ್ಥೆ, ಇಂದು ಮಹಾರಾಷ್ಟ್ರ ಮತ್ತು ಕರ್ನಾಟಕ ರಾಜ್ಯಗಳಲ್ಲಿ ತನ್ನ ಸೇವೆಯನ್ನು ಯಶಸ್ವಿಯಾಗಿ ವಿಸ್ತರಿಸಿಕೊಂಡು, ಸಹಕಾರ ಕ್ಷೇತ್ರಕ್ಕೆ ಒಂದು ಮಾದರಿಯ ಸಂಸ್ಥೆಯಾಗಿ ಗುರುತಿಸಿಕೊಂಡಿದೆ.

### ಆರ್ಥಿಕ ಶಿಸ್ತು – ವಿಶ್ವಾಸದ ಅಡಿಪಾಯ

2025ರ ಡಿಸೆಂಬರ್-31ರ ವೇಳೆಗೆ ಕರ್ಮವೀರ ಸೊಸೈಟಿಯು 35 ಶಾಖೆಗಳೊಂದಿಗೆ ಕಾರ್ಯನಿರ್ವಹಿಸುತ್ತಿದ್ದು, ಅವುಗಳಲ್ಲಿ 18 ಶಾಖೆಗಳು ಸ್ವಂತ ಕಟ್ಟಡಗಳಲ್ಲಿ ಸ್ಥಾಪಿತವಾಗಿರುವುದು ಸಂಸ್ಥೆಯ ಆರ್ಥಿಕ ಬಲವನ್ನು ಸ್ಪಷ್ಟಪಡಿಸುತ್ತದೆ. 80,285 ಸದಸ್ಯರನ್ನು ಹೊಂದಿರುವ ಈ ಸಂಸ್ಥೆಯಲ್ಲಿ, ಎಲ್ಲಾ ಠೇವಣಿದಾರರೂ ಶೇರುದಾರ ಸದಸ್ಯರಾಗಿರುವುದು ಸಹಕಾರ ತತ್ವದ ನಿಜವಾದ ಅನುಷ್ಠಾನವಾಗಿದೆ. ರೂ. 100 ಕೋಟಿ ಸ್ವಂತ ನಿಧಿ, ರೂ.735 ಕೋಟಿ ಠೇವಣಿ, ರೂ.486 ಕೋಟಿ ಸಾಲ ವಿತರಣೆ (ಅದರಲ್ಲೂ ರೂ.205 ಕೋಟಿ ಚಿನ್ನದ ಸಾಲ), ರೂ.358 ಕೋಟಿ ಹೂಡಿಕೆ ಮತ್ತು ಒಟ್ಟು ರೂ.1,221 ಕೋಟಿ ವ್ಯವಹಾರ ಪ್ರಮಾಣ – ಇವು ಕೇವಲ ಸಂಖ್ಯೆಗಳಲ್ಲ; ಇವು ಸಾರ್ವಜನಿಕ ವಿಶ್ವಾಸದ ಪ್ರತೀಕಗಳು.

ಮಾರ್ಚ್ 2025ರಲ್ಲಿ ರೂ.11 ಕೋಟಿ ನಿವ್ವಳ ಲಾಭ, 0% ಎನ್‌ಪಿಎ ಮತ್ತು 16.74% ಸಿಆರ್‌ಎಆರ್ ಸಾಧಿಸಿರುವುದು, ಪ್ರುಡೆನ್ಷಿಯಲ್ ನಾರ್ಮ್ಸ್‌ಗಳನ್ನು ಸಂಪೂರ್ಣವಾಗಿ ಪಾಲಿಸುವ ಅಪರೂಪದ ಸಹಕಾರಿ ಸಂಸ್ಥೆಯೆಂದು ಕರ್ಮವೀರ ಸೊಸೈಟಿಯನ್ನು ಗುರುತಿಸುತ್ತದೆ.

### ಸಾಮಾಜಿಕ ಜವಾಬ್ದಾರಿಯ ಸ್ಪಷ್ಟ ಮುಖ

ಕರ್ಮವೀರ ಸೊಸೈಟಿ ಹಣಕಾಸಿನ ಯಶಸ್ಸಿನೊಂದಿಗೆ ಸಮಾಜದ ನೋವು-ನಲಿವಿಗೂ ಸ್ಪಂದಿಸುತ್ತಿರುವುದು ಅದರ ವಿಶಿಷ್ಟತೆ. ಮನೆ ಆಧಾರಿತ ಚಿಕಿತ್ಸೆಯ ಅಗತ್ಯವಿರುವ ರೋಗಿಗಳಿಗೆ ಉಚಿತ ನೆರವು ನೀಡುವ ಉದ್ದೇಶದಿಂದ, ವೀರಾಚಾರ್ಯ ಬಾಬಾಸೋ ಕುಚ್ನೂರೆ ಆರೋಗ್ಯ ರಕ್ಷಣಾ ಸೌಲಭ್ಯವನ್ನು ಜೈಸಿಂಗ್‌ಪುರ, ರುಕ್ಡಿ, ಕುರುಂದ್‌ವಾಡ್ ಮತ್ತು ಸಂಗವಾಡೆ ಪ್ರದೇಶಗಳಲ್ಲಿ ಆರಂಭಿಸಲಾಗಿದೆ. ಈ ಯೋಜನೆಯ ಮೂಲಕ ಮಡಿಸುವ ಹಾಸಿಗೆಗಳು, ವೀಲ್ ಚೇರ್‌ಗಳು, ಕಮೋಡ್ ಕುರ್ಚಿಗಳು, ಆಮ್ಲಜನಕ ಯಂತ್ರಗಳು ಸೇರಿದಂತೆ ಅಗತ್ಯ ವೈದ್ಯಕೀಯ ಉಪಕರಣಗಳನ್ನು ಉಚಿತವಾಗಿ ಒದಗಿಸಲಾಗುತ್ತಿದೆ. ಇದು ಸಹಕಾರ ಸಂಸ್ಥೆಯು ಮಾನವೀಯತೆಯೊಂದಿಗೆ ಹೇಗೆ ಬೆಸೆದುಕೊಳ್ಳಬಹುದು ಎಂಬುದಕ್ಕೆ ಜೀವಂತ ಸಾಕ್ಷಿ. ಇದಲ್ಲದೆ, ದತ್ತಿ ನಿಧಿಯ ಮೂಲಕ ಪರಿಹಾರ ಮತ್ತು ಸಾಮಾಜಿಕ ಕಲ್ಯಾಣ ಚಟುವಟಿಕೆಗಳಿಗೆ ಹಣಕಾಸಿನ ನೆರವು. ಸದಸ್ಯ ಕಲ್ಯಾಣ ನಿಧಿಯ ಮೂಲಕ ಸದಸ್ಯರು ಮತ್ತು ಮೃತ ಸದಸ್ಯರ ಕುಟುಂಬಗಳಿಗೆ ಆರ್ಥಿಕ ಭದ್ರತೆ ನೌಕರರ ಕಲ್ಯಾಣ ನಿಧಿಯ ಮೂಲಕ ಸಿಬ್ಬಂದಿಗೆ ಸಹಾಯ ಈ ಎಲ್ಲ ಕ್ರಮಗಳು ಕರ್ಮವೀರ ಸೊಸೈಟಿಯ ಸಾಮಾಜಿಕ ಬದ್ಧತೆಯನ್ನು ಪ್ರತಿಬಿಂಬಿಸುತ್ತವೆ.

### ಹೆಣ್ಣು ಮಕ್ಕಳ ಭವಿಷ್ಯಕ್ಕೆ ಹೂಡಿಕೆ

ಬಾಲಕಿಯರ ಮಕ್ಕಳ ರಕ್ಷಣೆ ಮತ್ತು ಶಕ್ತೀಕರಣದ ನಿಟ್ಟಿನಲ್ಲಿ ಜಾರಿಯಲ್ಲಿರುವ ಲಕ್ಷ್ಮಿಬಾಯಿ ಪಾಟೀಲ್ ಸುಕನ್ಯಾ ಸಮ್ಮಾನ್ ಯೋಜನೆ ಅತ್ಯಂತ ಶ್ಲಾಘನೀಯವಾಗಿದೆ. ಸದಸ್ಯರ ಕುಟುಂಬದಲ್ಲಿ ಹೆಣ್ಣು ಮಗು ಜನಿಸಿದ ನಂತರ, ಆ ಮಗುವಿನ ಹೆಸರಿನಲ್ಲಿ ರೂ.5,000 ಠೇವಣಿ ಇಡುವ ಮೂಲಕ, ಹೆಣ್ಣು ಮಕ್ಕಳ ಭವಿಷ್ಯಕ್ಕೆ ಆರ್ಥಿಕ ಭದ್ರತೆ ನೀಡುವ ಜೊತೆಗೆ ಸಾಮಾಜಿಕ ಜಾಗೃತಿಯನ್ನೂ ಬೆಳೆಸಲಾಗುತ್ತಿದೆ.

### ಪ್ರಶಸ್ತಿಗಳು – ಕಾರ್ಯದ ಮಾನ್ಯತೆ

ಕರ್ಮವೀರ ಸೊಸೈಟಿಯು ಇದುವರೆಗೆ 26ಕ್ಕೂ ಅಧಿಕ ಪ್ರಶಸ್ತಿಗಳನ್ನು ಪಡೆದುಕೊಂಡಿದೆ. ಮಲ್ಟಿಸ್ಟೇಟ್ ಸೊಸೈಟಿಗಳ ಒಕ್ಕೂಟದಿಂದ ಸತತ ಮೂರು ಬಾರಿ "ಬೆಸ್ಟ್ ಸೊಸೈಟಿ" ಪ್ರಶಸ್ತಿ, ಗ್ರೀನ್ ವರ್ಲ್ಡ್ ಹಾಗೂ ಕಾಸ್ಮೊಸ್ ಬ್ಯಾಂಕ್‌ನಿಂದ ಅತ್ಯುತ್ತಮ ಸಹಕಾರಿ ಸಂಸ್ಥೆಯೆಂಬ ಗೌರವ – ಇವು ಸಂಸ್ಥೆಯ ನಿರಂತರ ಶ್ರಮಕ್ಕೆ ದೊರೆತ ಅಧಿಕೃತ ಮನ್ನಣೆಗಳಾಗಿವೆ.

### ಭವಿಷ್ಯದ ದೃಷ್ಟಿ

2025-26ರಿಂದ 2029-30ರವರೆಗೆ ರೂ.1,500 ಕೋಟಿ ಠೇವಣಿ, ರೂ.1,000 ಕೋಟಿ ಸಾಲ ಮತ್ತು ರೂ.160 ಕೋಟಿ ಸ್ವಂತ ನಿಧಿಯ ಗುರಿಯನ್ನು ಹೊಂದಿರುವ ಕರ್ಮವೀರ ಸೊಸೈಟಿ, ಸಮತೋಲನದ ಮತ್ತು ಸ್ಥಿರ ಬೆಳವಣಿಗೆಯ ದಾರಿಯಲ್ಲಿ ಸಾಗುತ್ತಿದೆ. ಈ ದೃಷ್ಟಿಕೋನ ಸಹಕಾರ ಕ್ಷೇತ್ರಕ್ಕೆ ದೀರ್ಘಕಾಲೀನ ಮಾರ್ಗಸೂಚಿಯಾಗಿದೆ.

### ಸಮಾರೋಪ

ಕರ್ಮವೀರ ಮಲ್ಟಿಸ್ಟೇಟ್ ಕೋ-ಆಪರೇಟಿವ್ ಕ್ರೆಡಿಟ್ ಸೊಸೈಟಿ ಇಂದು ಕೇವಲ ಒಂದು ಹಣಕಾಸು ಸಂಸ್ಥೆಯಲ್ಲ – ಅದು ನಂಬಿಕೆ,

# ಸಹಕಾರಿ ಮುಖಂಡ, ಮಹಾರಾಷ್ಟ್ರ ಉಪಮುಖ್ಯಮಂತ್ರಿ ಅಜಿತ್ ಪವಾರ್ ನಿಧನ - ಗಣ್ಯರ ಕಂಬನಿ

## ಭಾರತೀಯ ಸಹಕಾರಿ ವಲಯಕ್ಕೆ ಇದು ಕರಾಳ ದಿನ - ಡಾ. ಸಂಜಯ ಪಿ. ಹೊಸಮಠ



ಬಾರಾಮತಿ ಬಳಿ ವಿಮಾನ ಅಪಘಾತದಲ್ಲಿ ಮಹಾರಾಷ್ಟ್ರ ಉಪ ಮುಖ್ಯಮಂತ್ರಿ ಅಜಿತ್ ಪವಾರ್ ನಿಧನರಾದ ದುರಂತ ಸುದ್ದಿಯ ನಂತರ ಭಾರತದಾದ್ಯಂತ ಸಹಕಾರಿ ಸಮುದಾಯವು ತೀವ್ರ ಶೋಕವ್ಯಕ್ತಪಡಿಸಿದೆ.

ಬೆಂಗಳೂರಿನ ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ನಿರ್ದೇಶಕ ಡಾ. ಸಂಜಯ ಹೊಸಮಠ ಅವರು ಕರ್ನಾಟಕದ ಸಹಕಾರ ಪತ್ತಿನ ಸಂಘಗಳ ಪರವಾಗಿ ತೀವ್ರ ಆಘಾತ ಮತ್ತು ದುಃಖವನ್ನು ವ್ಯಕ್ತಪಡಿಸಿದ್ದಾರೆ. ಶ್ರೀ ಅಜಿತ್ ಪವಾರ್ ಅವರನ್ನು ದಶಕಗಳು ಮತ್ತು ರಾಜ್ಯ ಗಡಿಗಳನ್ನು ವ್ಯಾಪಿಸಿರುವ "ಗ್ರಾಮೀಣ ಆರ್ಥಿಕತೆಯ ಟೈಟನ್" ಎಂದು ಶ್ಲಾಘಿಸಿದ್ದಾರೆ.

**ಸಹಕಾರಿ ಪ್ರತಿಷ್ಠಾನದ ಮೇಲೆ ನಿರ್ಮಿಸಲಾದ ಪರಂಪರೆ :** ಪ್ರಾದೇಶಿಕ ಅಭಿವೃದ್ಧಿಗಾಗಿ ತಳಮಟ್ಟದ ಸಂಸ್ಥೆಗಳನ್ನು ಸದುಪಯೋಗಪಡಿಸಿಕೊಳ್ಳುವಲ್ಲಿ ಅಜಿತ್ ಪವಾರ್ ಅವರ ವೃತ್ತಿಜೀವನವು ಒಂದು ಮಾಸ್ಟರ್‌ಕ್ಲಾಸ್ ಆಗಿತ್ತು. ಅವರ ಪ್ರಯಾಣವು 22ನೇ ವಯಸ್ಸಿನಲ್ಲಿ ಸಹಕಾರ ಸಂಘದ ನಿರ್ದೇಶಕರಾಗಿ ಪ್ರಾರಂಭವಾಯಿತು. ಪುಣೆ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ (PDCCB) ಅವರ ದೂರದೃಷ್ಟಿಯ ಉಸ್ತುವಾರಿಯಲ್ಲಿ, ಅವರು ರೂ.558 ಕೋಟಿ ವಹಿವಾಟು ಹೊಂದಿರುವ ಸಾಧಾರಣ ಸಂಸ್ಥೆಯಿಂದ PDCCB ಅನ್ನು 20,000 ಕೋಟಿಗಿಂತ ಹೆಚ್ಚಿನ ಆರ್ಥಿಕ ಶಕ್ತಿ ಕೇಂದ್ರವಾಗಿ ಪರಿವರ್ತಿಸಿದರು, ಇದು ಭಾರತದ ಅತ್ಯಂತ ಪ್ರಮುಖ ಸಹಕಾರಿ ಬ್ಯಾಂಕ್‌ಗಳಲ್ಲಿ ಒಂದಾಗಿದೆ.

**ಗ್ರಾಮೀಣ ಸಮೃದ್ಧಿಯ ಶಿಲ್ಪಿ :** ಪವಾರ್ ಅವರ ನಾಯಕತ್ವವು ಮಹಾರಾಷ್ಟ್ರದ ಗ್ರಾಮೀಣ ಮೂಲಸೌಕರ್ಯದ ಪ್ರತಿಯೊಂದು ಅಪಧಮನಿಯ ಮೂಲಕವೂ ವಿಸ್ತರಿಸಿತು.

**ಬ್ಯಾಂಕಿಂಗ್:** PDCCB ಅಧ್ಯಕ್ಷರಾಗಿ ಮತ್ತು ಮಹಾರಾಷ್ಟ್ರ ರಾಜ್ಯ ಸಹಕಾರಿ ಬ್ಯಾಂಕ್ (MSC ಬ್ಯಾಂಕ್) ನಿರ್ದೇಶಕರಾಗಿ (ಮತ್ತು ಸಂಕ್ಷಿಪ್ತವಾಗಿ ಅಧ್ಯಕ್ಷರಾಗಿ) ಸೇವೆ ಸಲ್ಲಿಸಿದರು.

**ಸಕ್ಕರೆ ಮತ್ತು ಕೈಗಾರಿಕೆ :** ನಿಯಂತ್ರಿತ ಮತ್ತು ಮಾಲೇಗಾಂವ್ ಮತ್ತು ಬಾರಾಮತಿ ಸಕ್ಕರೆ ಕಾರ್ಖಾನೆಗಳು ಸೇರಿದಂತೆ ಪ್ರಮುಖ ಸಹಕಾರಿ ಮತ್ತು ಖಾಸಗಿ ಸಕ್ಕರೆ ಕಾರ್ಖಾನೆಗಳಿಗೆ ಮಾರ್ಗದರ್ಶನ ನೀಡಿದ್ದಾರೆ.

**ಮಾರುಕಟ್ಟೆ ಕೊಂಡಿಗಳು :** APMCಗಳು ಮತ್ತು ಹಾಲು ಸಹಕಾರಿ ಸಂಸ್ಥೆಗಳ ಮೇಲೆ ಗಮನಾರ್ಹ ಪ್ರಭಾವ ಬೀರಿತು, ಗ್ರಾಮೀಣ ಉತ್ಪಾದಕರು ರಾಜ್ಯ ಮತ್ತು ರಾಷ್ಟ್ರೀಯ ಮಾರುಕಟ್ಟೆಗಳಿಗೆ ನೇರವಾಗಿ ಸಂಪರ್ಕ ಹೊಂದಿದ್ದಾರೆ ಎಂದು ಖಚಿತಪಡಿಸಿತು.

**ನಾವೀನ್ಯತೆ :** ಬಾರಾಮತಿ ಸಹಕಾರಿ ಬ್ಯಾಂಕ್ ಸಂಸ್ಥಾಪಕರಾಗಿ ಮತ್ತು ಮಹಾರಾಷ್ಟ್ರ ರಾಜ್ಯದ ಸಹಕಾರ ಸಚಿವರಾಗಿ ಸೇವೆ ಸಲ್ಲಿಸಿದ್ದಾರೆ. ಕಬ್ಬು ರೈತರಿಗೆ ಸಾಲ ವ್ಯವಸ್ಥೆಗಳನ್ನು ಆಧುನೀಕರಿಸಿದರು. 2025ರಲ್ಲೂ ಸಹ, ಮಾಲೇಗಾಂವ್ ಸಹಕಾರಿ ಸಕ್ಕರೆ ಕಾರ್ಖಾನೆ ಮಂಡಳಿ ಚುನಾವಣೆಯಲ್ಲಿ ಅವರ ಸಮಿತಿ ನಿರ್ಣಾಯಕ ಗೆಲುವು ಸಾಧಿಸಿದಾಗ ಅವರ ನಿರಂತರ ಪ್ರಭಾವ ಸಾಬೀತಾಯಿತು – ಸುಮಾರು 40 ವರ್ಷಗಳಲ್ಲಿ ಇದು ಅವರ ಮೊದಲ ಮಂಡಳಿ ಸ್ಪರ್ಧೆಯಾಗಿತ್ತು.

**ಕರ್ನಾಟಕದಿಂದ ಸಂತಾಪಗಳು :** ಶ್ರೀ ಅಜಿತ್ ಪವಾರ್ ಅವರ ಕಾಲಿಕ ಮರಣದ ಕುರಿತು ಡಾ. ಸಂಜಯ ಹೊಸಮಠ ತೀವ್ರ ಶೊಕ ವ್ಯಕ್ತಪಡಿಸುತ್ತಾ "ಶ್ರೀ ಅಜಿತ್ ಪವಾರ್ ಒಬ್ಬ ರಾಜಕಾರಣಿಗಿಂತ ಹೆಚ್ಚು ಅವರು ಸಹಕಾರಿ ಚಳುವಳಿಯ ಹೃದಯ ಬಡಿತವಾಗಿದ್ದರು. ಅವರು ತಳಮಟ್ಟದ ರೈತರು ಮತ್ತು ರಾಜ್ಯ ಆಡಳಿತದ ನಡುವಿನ ಅಂತರವನ್ನು ಅಪ್ರತಿಮ ದಕ್ಷತೆಯಿಂದ ಕಡಿಮೆ ಮಾಡಿದರು. ಸಹಕಾರಿ ಬ್ಯಾಂಕಿಂಗ್‌ನ ಅವರ ಆಧುನೀಕರಣವು ಈ ವಲಯದಲ್ಲಿ ನಮಗೆಲ್ಲರಿಗೂ ಒಂದು ಮಾನದಂಡವಾಗಿದೆ.

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಪರವಾಗಿ, ನಾವು ಅವರ ಕುಟುಂಬ ಮತ್ತು ಮಹಾರಾಷ್ಟ್ರದ ಜನರಿಗೆ ನಮ್ಮ ಆಳವಾದ ಸಂತಾಪವನ್ನು ವ್ಯಕ್ತಪಡಿಸುತ್ತೇವೆ. ಅವರ ಪರಂಪರೆ ಗ್ರಾಮೀಣ ಭಾರತದ ಮಣ್ಣಿನಲ್ಲಿ ಉಳಿಯುತ್ತದೆ. ಸಾಮಾನ್ಯ ರೈತರ ಸಬಲೀಕರಣಕ್ಕಾಗಿ ತಮ್ಮ ಜೀವನವನ್ನು ಮುಡಿಪಾಗಿಟ್ಟ ನಾಯಕನ ನಿಧನಕ್ಕೆ ಕರ್ನಾಟಕ ಸಹಕಾರಿ ವಲಯವು ಮಹಾರಾಷ್ಟ್ರದೊಂದಿಗೆ ಸೇರಿ ಈ ಶೋಕವನ್ನು ಆಚರಿಸುತ್ತಿದೆ.

---

ಪಾರದರ್ಶಕತೆ, ಶಿಸ್ತು ಮತ್ತು ಸಮಾಜಮುಖಿ ಸೇವೆಯ ಸಂಯೋಜಿತ ಮಾದರಿ. ಈ ಸಂಸ್ಥೆಗೆ ನಾನು ಭೇಟಿ ನೀಡಿದ ಸಂದರ್ಭ ನನಗೆ ಅಪಾರ ಹೆಮ್ಮೆ ಮತ್ತು ಆತ್ಮತೃಪ್ತಿಯನ್ನು ನೀಡಿದೆ. ಇತರ ಸಹಕಾರಿ ಸಂಸ್ಥೆಗಳಿಗೆ ಇದು ನಿಜಕ್ಕೂ ಒಂದು ದಾರಿದೀಪ. ಸಹಕಾರ ಕ್ಷೇತ್ರವು ಯಾವ ದಿಕ್ಕಿನಲ್ಲಿ ಸಾಗಬೇಕು ಎಂಬುದಕ್ಕೆ ಕರ್ಮವೀರ ಸೊಸೈಟಿ ಒಂದು ಸ್ಪಷ್ಟ ಉತ್ತರವಾಗಿದೆ.

# ಸಹಕಾರ ಪತ್ತಿನ ಸಂಘಗಳು ಭಾರತೀಯ ಆರ್ಥಿಕತೆಯ ಬೆನ್ನೆಲುಬು : ಡಾ. ಸಂಜಯ ಪಂಚಾಕ್ಷರಿ ಹೊಸಮಠ

**ಕೋಲಾಪುರ (ಮಹಾರಾಷ್ಟ್ರ) :** ಬಹುರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳವು (Federation of Multi-State Cooperative Credit Societies Limited) ಕೋಲಾಪುರ ನಗರದ ರೆಸಿಡೆನ್ಸಿ ಕ್ಲಬ್‌ನಲ್ಲಿ ಜನವರಿ–9 ರಂದು ಹಮ್ಮಿಕೊಂಡಿದ್ದ ಅಂತರರಾಷ್ಟ್ರೀಯ ಸಹಕಾರ ವರ್ಷದ ಸಮಾರೋಪದ ಕಾರ್ಯಕ್ರಮ ಹಾಗೂ ಕಾರ್ಯಾಗಾರದ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ನಿರ್ದೇಶಕರಾದ ಡಾ. ಸಂಜಯ ಹೊಸಮಠರವರು, "ಭಾರತೀಯ ಆರ್ಥಿಕತೆಯಲ್ಲಿ ಸಹಕಾರ ಪತ್ತಿನ ಸಂಘಗಳು ಮತ್ತು ಬಹುರಾಜ್ಯ ಸಹಕಾರ ಪತ್ತಿನ ಸಂಘಗಳ ಪಾತ್ರ ಅತ್ಯಂತ ಮಹತ್ವದ್ದಾಗಿದೆ" ಎಂದು ಹೇಳಿದರು.

ಮುಂದುವರೆದು ಮಾತನಾಡುತ್ತಾ ಸಹಕಾರ ಪತ್ತಿನ ಸಂಘಗಳು ದೇಶದ ಅರ್ಥ ವ್ಯವಸ್ಥೆಯಲ್ಲಿ ಬೆನ್ನೆಲುಬು ಆಗಿ ಕೆಲಸ ಮಾಡುತ್ತಿವೆ. "ಸಹಕಾರ ಕ್ಷೇತ್ರವು ಒಂದು ಸಾಗರವಿದ್ದಂತೆ". ನಾವು ಇಲ್ಲಿ ಕೇವಲ ಲಾಭಗಳಿಸುವ ಉದ್ದೇಶದಿಂದ ಇಲ್ಲ, ಬದಲಿಗೆ ಸಮಾಜದ ಸದಸ್ಯರ ಸೇವೆಗಾಗಿ ಇದ್ದೇವೆ. ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಆರ್ಥಿಕ ನೆರವು ಸಿಗುವಂತೆ ನೋಡುವುದು ನಮ್ಮ ಮೂಲ ಉದ್ದೇಶವಾಗಿದೆ" ಎಂದು ಡಾ. ಸಂಜಯ ಪಿ. ಹೊಸಮಠ ಅಭಿಪ್ರಾಯ ವ್ಯಕ್ತಪಡಿಸಿದರು.

ಈ ಸಮಾರಂಭದ ಉದ್ಘಾಟಕರಾಗಿ ಕೇಂದ್ರ ಸರ್ಕಾರದ ಸಹಕಾರ ಇಲಾಖೆಯ ಜಂಟಿ ನಿಬಂಧಕರಾದ ಶ್ರೀಮತಿ ಮೋನಿಕಾ ಖನ್ನಾ ಸಮಾರಂಭದ ಅಧ್ಯಕ್ಷತೆಯನ್ನು ಬಹುರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಅಧ್ಯಕ್ಷರಾದ ಶ್ರೀ ಸುರೇಶ್ ವಾಬಳೆ ವಹಿಸಿದ್ದರು. ಅತಿಥಿಗಳಾಗಿ ಬೆಳಗಾವಿಯ ಉಪನಿಬಂಧಕರಾದ ಶ್ರೀ ರವೀಂದ್ರ ಪಾಟೀಲ, ಮಹಾರಾಷ್ಟ್ರ ರಾಜ್ಯ ಸರ್ಕಾರ ಇಲಾಖೆಯ ಕೋಲಾಪುರ ವಿಭಾಗದ ಜಂಟಿ ನಿಬಂಧಕರಾದ ಡಾ. ಮಹೇಶ ಕದಮ, ಬಹುರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಉಪಾಧ್ಯಕ್ಷರಾದ ಡಾ. ವಿ.ಎಸ್. ಅಂಕಲ್ಕೋಟೆ ಪಾಟೀಲ ಹಾಗೂ ಸಂಚಾಲಕರಾದ ನ್ಯಾಯವಾದಿ ಶ್ರೀ ಪ್ರಮೋದ ಗಡಿಗೆ ವೇದಿಕೆ ಮೇಲೆ ಉಪಸ್ಥಿತರಿದ್ದರು.

**ಸಹಕಾರ ಪತ್ತಿನ ಸಂಘಗಳ ಬಲವರ್ಧನೆಗಾಗಿ ಡಾ. ಸಂಜಯ ಪಿ ಹೊಸಮಠರವರು ಮಂಡಿಸಿದ ಪ್ರಮುಖ ಅಂಶಗಳು:**

1. **ಕ್ರೆಡಿಟ್ ಸ್ಕೋರ್ ವ್ಯವಸ್ಥೆ:** ರಾಷ್ಟ್ರೀಕೃತ ಮತ್ತು ಖಾಸಗಿ ಬ್ಯಾಂಕುಗಳಲ್ಲಿ ಅಳವಡಿಸಿರುವ 'ಸಿಬಿಲ್' (CIBIL) ಸ್ಕೋರ್ ಮಾದರಿಯಲ್ಲೇ ಸಹಕಾರ ಪತ್ತಿನ ಸಂಘಗಳಿಗೂ ಪ್ರತ್ಯೇಕ ಕ್ರೆಡಿಟ್ ಸ್ಕೋರ್ ವ್ಯವಸ್ಥೆ ಇರಬೇಕು.



2. **ಏಕರೂಪದ ಸಾಫ್ಟ್‌ವೇರ್:** ಪಾರದರ್ಶಕತೆ ಯನ್ನು ತರಲು ಎಲ್ಲಾ ಸಂಘಗಳಿಗೆ ಸಾಮಾನ್ಯ ಅಪ್ಲಿಕೇಶನ್ ಸಾಫ್ಟ್‌ವೇರ್ ಅಳವಡಿಸಬೇಕು.
3. **ಠೇವಣಿ ವಿಮೆ:** ಖಾಸಗಿ ಬ್ಯಾಂಕ್‌ಗಳಂತೆ ಸಹಕಾರಿ ಕ್ರೆಡಿಟ್ ಸೊಸೈಟಿಗಳ ಠೇವಣಿದಾರರಿಗೂ ವಿಮಾ ಸೌಲಭ್ಯ ಒದಗಿಸಬೇಕು.
4. **ಸಾಲ ವಸೂಲಾತಿ ನಿಯಮಗಳ ಸುಧಾರಣೆ:** ಮಧ್ಯಸ್ಥಿಕೆ (Arbitration) ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥಪಡಿಸಲು ಸಾಲ ವಸೂಲಾತಿ ನಿಯಮಗಳನ್ನು ಮೇಲ್ದರ್ಜೆಗೆ ಏರಿಸಬೇಕು.
5. **ಪ್ರತ್ಯೇಕ ಸಹಕಾರಿ ನ್ಯಾಯಾಲಯ:** ಸಹಕಾರ ಕ್ಷೇತ್ರಕ್ಕೆ ಸಂಬಂಧಿಸಿದ ವಿವಾದಗಳನ್ನು ಬಗೆಹರಿಸಲು ಮೀಸಲಾದ ಪ್ರತ್ಯೇಕ ನ್ಯಾಯಾಲಯಗಳನ್ನು ಸ್ಥಾಪಿಸಬೇಕು.
6. **ಸರ್ಕಾರಿ ಭದ್ರತೆಗಳಲ್ಲಿ ಹೂಡಿಕೆ:** ಸಹಕಾರ ಪತ್ತಿನ ಸಂಘಗಳಿಗೂ ಸರ್ಕಾರದ ಭದ್ರತೆಗಳಲ್ಲಿ (Government Securities) ಹೂಡಿಕೆ ಮಾಡಲು ಅವಕಾಶ ನೀಡಬೇಕು.
7. **ಪರ್ಯಾಯ ಆದಾಯದ ಮೂಲ:** ಬಡ್ಡಿಯ ಹೊರತಾಗಿ ಸಹಕಾರಿ ಸಾಲ ವಲಯಕ್ಕೆ ಇತರ ಮೂಲಗಳಿಂದ ಆದಾಯಗಳಿಸಲು ಪರ್ಯಾಯ ಯೋಜನೆಗಳನ್ನು ರೂಪಿಸಬೇಕು.

ಸಹಕಾರಿ ಕ್ಷೇತ್ರದ ಏಳಿಗೆಗಾಗಿ ಈ ಅಂಶಗಳನ್ನು ಕೇಂದ್ರ ಸರ್ಕಾರ ಗಂಭೀರವಾಗಿ ಪರಿಗಣಿಸಬೇಕೆಂದು ಈ ಸಂದರ್ಭದಲ್ಲಿ ಕೇಂದ್ರ ಸರ್ಕಾರದ ಸಹಕಾರ ಇಲಾಖೆಯ ಜಂಟಿ ನಿಬಂಧಕರಾದ ಶ್ರೀಮತಿ ಮೋನಿಕಾ ಖನ್ನಾ ಅವರನ್ನು ಒತ್ತಾಯಿಸಿದರು.

ಈ ಕಾರ್ಯಾಗಾರದಲ್ಲಿ ಬಹು–ರಾಜ್ಯ ಸಹಕಾರ ಪತ್ತಿನ ಸಂಘಗಳಿಗೆ ಸಂಬಂಧಿಸಿದ ಪ್ರಮುಖ ಸಮಸ್ಯೆಗಳು, ನಿಯಂತ್ರಕ ಸವಾಲುಗಳು ಮತ್ತು ಆಡಳಿತಾತ್ಮಕ ಅಂಶಗಳ ಬಗ್ಗೆ ಸುದೀರ್ಘ ಚರ್ಚೆ ನಡೆಸಲಾಯಿತು.

ಕೊನೆಯದಾಗಿ ಸಂಚಾಲಕರಾದ ನ್ಯಾಯವಾದಿ ಶ್ರೀ ಪ್ರಮೋದ್ ಗಡಿಗೆಯವರು ವಂದನಾರ್ಪಣೆ ಮಾಡಿದರು.

# ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆ ಹೊಸ ಸದಸ್ಯರ ನೋಂದಣಿಗೆ ಮಾರ್ಗಸೂಚಿಗಳು

**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ : 2025–26ನೇ ಸಾಲಿಗೆ ಸಹಕಾರಿಗಳಿಗಾಗಿ ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆಯನ್ನು ಜಾರಿಗೊಳಿಸಲು ಹಾಗೂ ಹೊಸ ಸದಸ್ಯರನ್ನು ನೋಂದಾಯಿಸುವ ಬಗ್ಗೆ.

ಉಲ್ಲೇಖ :
1. ಸರ್ಕಾರದ ಆದೇಶ ಸಂಖ್ಯೆ: ಸಿಒ 237 ಸಿಎಲ್‌ಎಸ್ 2024, ದಿ: 30–11–2024.
2. ಮುಖ್ಯಕಾರ್ಯನಿರ್ವಹಣಾಧಿಕಾರಿ (ಪ್ರ) ಯಶಸ್ವಿನಿ ಟ್ರಸ್ಟ್ ಇವರ ಕಛೇರಿ ಪತ್ರ ಸಂಖ್ಯೆ: ಯಶಸ್ವಿನಿ/18/ಸಿಡಬ್ಲ್ಯೂ–2/ಯ.ಸ.ನೋ.ಆ/2025–26, ದಿನಾಂಕ: 8–9–2025.

**ಪ್ರಸ್ತಾವನೆ :**

ಮೇಲೆ ಓದಲಾದ ಕ್ರ.ಸಂ. (1)ರ ಸರ್ಕಾರದ ಆದೇಶದಲ್ಲಿ 2024–25ನೇ ಸಾಲಿಗೆ ಸಹಕಾರಿಗಳಿಗಾಗಿ ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆಯನ್ನು ಸಹಕಾರ ಇಲಾಖೆಯಿಂದ ಜಾರಿಗೊಳಿಸಲು ಹಾಗೂ ಸದಸ್ಯರನ್ನು ನೋಂದಾಯಿಸಲು ಮಾರ್ಗಸೂಚಿಗಳೊಂದಿಗೆ ಆದೇಶ ಹೊರಡಿಸಲಾಗಿತ್ತು. ಮೇಲೆ ಓದಲಾದ ಕ್ರ.ಸಂ. (2)ರ ಮುಖ್ಯಕಾರ್ಯನಿರ್ವಹಣಾಧಿಕಾರಿ (ಪ್ರ), ಯಶಸ್ವಿನಿ ಟ್ರಸ್ಟ್ ಇವರ ಪತ್ರದಲ್ಲಿ, ಯಶಸ್ವಿನಿ ಯೋಜನೆಯು ಸಹಕಾರ ಸಂಘಗಳ ಸದಸ್ಯರ ಅನುಕೂಲಕ್ಕಾಗಿ ಸರ್ಕಾರವು ಜಾರಿಗೊಳಿಸಿರುವ ಒಂದು ಪ್ರತಿಷ್ಠಿತ (Flagship) ವಿಶಿಷ್ಟ ಯೋಜನೆಯಾಗಿದ್ದು, ಇದರಲ್ಲಿ ಯಶಸ್ವಿನಿ ಪ್ರೋಟೋಕಾಲ್‌ನಂತೆ ನಿಗದಿಪಡಿಸಿರುವ ಚಿಕಿತ್ಸೆಗಳ ಪ್ಯಾಕೇಜಿನ ದರದ ಮಿತಿಗೊಳಪಟ್ಟು ಫಲಾನುಭವಿ ಮತ್ತು ಅವರ ಕುಟುಂಬಕ್ಕೆ ವಾರ್ಷಿಕ ಗರಿಷ್ಠ ರೂ. 5.00 ಲಕ್ಷ ವೈದ್ಯಕೀಯ ಚಿಕಿತ್ಸಾ ವೆಚ್ಚದ ಮಿತಿಯೊಂದಿಗೆ ನೆಟ್‌ವರ್ಕ್ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಲು ಅವಕಾಶ ಇರುತ್ತದೆ. ಯಶಸ್ವಿನಿ ಯೋಜನೆಯು ವಿಮಾ ಯೋಜನೆಯಾಗಿರುವುದಿಲ್ಲ. ಬದಲಾಗಿ ಇದೊಂದು ಸ್ವಯಂ ನಿಧಿ ಯೋಜನೆಯಾಗಿರುತ್ತದೆ. ಸಹಕಾರ ಸಂಘಗಳ ಸದಸ್ಯರ ಆರೋಗ್ಯ ರಕ್ಷಣೆ (Co-operative Society Members Health Assurance Scheme) ಯೋಜನೆಯಾಗಿದ್ದು, ಸಹಕಾರ ಸಂಘಗಳ ಸದಸ್ಯರು ನಿಗದಿತ ವಾರ್ಷಿಕ ವಂತಿಗೆಯನ್ನು ಪಾವತಿಸಿ ಯೋಜನೆಯಲ್ಲಿ ಪಾಲ್ಗೊಳ್ಳುತ್ತಾರೆ. ರಾಜ್ಯ ಸರ್ಕಾರವು ಆಯವ್ಯಯದಲ್ಲಿ ಅನುದಾನ ಒದಗಿಸುವ ಮೂಲಕ ಯೋಜನೆಯಲ್ಲಿ ಭಾಗವಹಿಸುತ್ತದೆ.

ಯಶಸ್ವಿನಿ ಯೋಜನೆಯನ್ನು 2025–26ನೇ ಸಾಲಿಗೂ ಮುಂದುವರೆಸಲು ಯಶಸ್ವಿನಿ ಟ್ರಸ್ಟ್ ಇವರು ಕೋರಿರುವುದರಿಂದ ಸದಸ್ಯರ ನೋಂದಣಿಯನ್ನು ಪ್ರಾರಂಭಿಸಲು ಯೋಜನೆಯ ಮಾರ್ಗಸೂಚಿಗಳನ್ನು ಹೊರಡಿಸಬೇಕಾಗಿದ್ದು, ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಸಿಒ 275 ಸಿಎಲ್‌ಎಸ್ 2025, ದಿನಾಂಕ : 02–01–2026**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ 2025–26ನೇ ಸಾಲಿನಲ್ಲಿ ಯಶಸ್ವಿನಿ ಯೋಜನೆಯನ್ನು ಮುಂದುವರೆಸಲು ಹಾಗೂ ಈ ಯೋಜನೆಯಲ್ಲಿ ಹೊಸ ಸದಸ್ಯತ್ವ ನೋಂದಣಿ ಪ್ರಾರಂಭಿಸಲು ಈ ಕೆಳಕಂಡ ಮಾರ್ಗಸೂಚಿಗಳೊಂದಿಗೆ ಆದೇಶ ಹೊರಡಿಸಿದೆ.

**ಯೋಜನೆಯ ಮಾರ್ಗಸೂಚಿಗಳು :**

1. ಯಾವುದೇ ಸಹಕಾರ ಸಂಘಗಳ ಕಾಯ್ದೆಗಳಡಿ (ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959, ಕರ್ನಾಟಕ ಸೌಹಾರ್ದ ಸಹಕಾರಿಗಳ ಕಾಯ್ದೆ 1997 ಅಥವಾ ಬಹು ರಾಜ್ಯ ಸಹಕಾರಿ ಸಂಘಗಳ ಕಾಯ್ದೆ 2002) ನೋಂದಾಯಿಸಿ, ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಯಾವುದೇ ಸಹಕಾರ ಸಂಘ/ ಬ್ಯಾಂಕುಗಳ (ಗ್ರಾಮೀಣ ಮತ್ತು ನಗರ ಸಹಕಾರ ಸಂಘಗಳು ಒಳಗೊಂಡಂತೆ) ಸದಸ್ಯರು ಅಥವಾ ಸಹಕಾರಿ ಸ್ವಸಹಾಯ ಗುಂಪುಗಳ ಸದಸ್ಯರು, ಸದಸ್ಯರಾಗಿ ಒಂದು ತಿಂಗಳು ಪೂರ್ಣಗೊಂಡಿದ್ದಲ್ಲಿ ಅಂತಹ ಸದಸ್ಯರು ಅಥವಾ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರಡಿ ನೋಂದಾವಣಿಯಾಗಿ ಕಾರ್ಯನಿರತ ಸಹಕಾರ ಸಂಘಗಳಲ್ಲಿ ಕನಿಷ್ಠ 3 ವರ್ಷ ಸೇವೆ ಪೂರ್ಣಗೊಳಿಸಿ ಮಾಸಿಕ ರೂ. 30,000 ಮತ್ತು ಅದಕ್ಕಿಂತ ಕಡಿಮೆ ಒಟ್ಟು ವೇತನ ಪಡೆಯುತ್ತಿರುವ ನೌಕರರು ಮತ್ತು ಅವರ ಅರ್ಹ ಕುಟುಂಬ ಸದಸ್ಯರು ನಿಗದಿತ ವಾರ್ಷಿಕ ವಂತಿಕೆಯನ್ನು ಪಾವತಿಸಿ ಯಶಸ್ವಿನಿ ಯೋಜನೆಯಡಿ ಸದಸ್ಯರಾಗಲು ಅರ್ಹರಿರುತ್ತಾರೆ. (ನೌಕರರಾಗಿದ್ದಲ್ಲಿ ಕನಿಷ್ಠ 3 ವರ್ಷ ಸೇವೆ ಮತ್ತು ರೂ. 30,000 ಮತ್ತು ಅದಕ್ಕಿಂತ ಕಡಿಮೆ ವೇತನ ಪಡೆಯುತ್ತಿರುವ ಬಗ್ಗೆ ಸಂಬಂಧಿಸಿದ ಸಹಕಾರ ಸಂಘದ ಆಡಳಿತ ಮಂಡಳಿ ದೃಢೀಕರಣ ಪತ್ರ ಲಗತ್ತಿಸಬೇಕು)
2. ಸಮಾಪನೆ/ನಿಷ್ಕ್ರಿಯಗೊಂಡಿರುವ ಸಹಕಾರ ಸಂಘಗಳ ಹಾಗೂ ನೌಕರರ ಸಹಕಾರ ಸಂಘಗಳ ಸದಸ್ಯರು ಅಥವಾ ಪ್ರಧಾನ ಅರ್ಜಿದಾರರು ಮತ್ತು ಅವನ ಕುಟುಂಬದ ಯಾವುದೇ ಸದಸ್ಯನು ಸರ್ಕಾರಿ ನೌಕರರಾಗಿದ್ದಲ್ಲಿ ಯೋಜನೆಗೆ ಅರ್ಹರಿರುವುದಿಲ್ಲ. ಅದೇ ರೀತಿ ಒಬ್ಬ ವ್ಯಕ್ತಿ ಖಾಸಗಿ ಕಂಪನಿ ಅಥವಾ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಮಾಸಿಕ ರೂ.30,000/–ಕ್ಕಿಂತ ಹೆಚ್ಚು ಒಟ್ಟು ವೇತನ ಪಡೆಯುತ್ತಿದ್ದಲ್ಲಿ ಅಥವಾ ಒಬ್ಬ ವ್ಯಕ್ತಿ ಯಾವುದೇ ಆರೋಗ್ಯ ವಿಮಾ ಯೋಜನೆಯಡಿಯಲ್ಲಿ ಸದಸ್ಯರಾಗಿದ್ದಲ್ಲಿ ಅಂತಹವರು ಯಶಸ್ವಿನಿ ಯೋಜನೆಯಡಿ ಸದಸ್ಯರಾಗಲು ಅರ್ಹರಿರುವುದಿಲ್ಲ. ಅಂತಹವರನ್ನು ಯಶಸ್ವಿನಿ ಯೋಜನೆಯ ಫಲಾನುಭವಿಯಾಗಿ ನೋಂದಾಯಿಸಬಾರದು. ಆದಾಗ್ಯೂ ಯಾವುದೇ ಕಾರಣಕ್ಕೆ ನೋಂದಾಯಿಸಿದ್ದಲ್ಲಿ ಸಹಿತ ಅವರು ಯೋಜನೆ ಸೌಲಭ್ಯ ಪಡೆಯಲು ಅರ್ಹರಾಗುವುದಿಲ್ಲ. ಅಂತಹ ವ್ಯಕ್ತಿಗಳು ಪಾವತಿಸಿದ ವಂತಿಗೆಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
3. ಯಶಸ್ವಿನಿ ಯೋಜನೆಯಲ್ಲಿನ ವ್ಯಾಖ್ಯಾನದಂತೆ "ಕುಟುಂಬ" ಎಂದರೆ ಪ್ರಧಾನ ಅರ್ಜಿದಾರರ (Principal Member) ತಂದೆ, ತಾಯಿ, ಗಂಡ/ಹೆಂಡತಿ, ಗಂಡು ಮಕ್ಕಳು, ಮದುವೆಯಾಗದ ಹೆಣ್ಣು ಮಕ್ಕಳು, ಸೊಸೆಯಂದಿರು ಮತ್ತು ಮೊಮ್ಮಕ್ಕಳು (ಗಂಡು ಮಕ್ಕಳ ಮಕ್ಕಳು) ಎಂದು ಅರ್ಥೈಯಿಸುವುದು. ಒಂದು ಮನೆಯಲ್ಲಿ ಸೊಸೆ ಪ್ರಧಾನ ಅರ್ಜಿದಾರರಾಗಿದ್ದಲ್ಲಿ ಅವರ ಗಂಡನ ತಂದೆ/ತಾಯಿ ಅಂದರೆ ಅರ್ಜಿದಾರರ ಅತ್ತೆ/ಮಾವ ಅರ್ಹ ಸದಸ್ಯರಾಗುತ್ತಾರೆ. ಆದರೆ ಅರ್ಜಿದಾರರ ತಂದೆ/ತಾಯಿಯವರನ್ನು ಸದಸ್ಯರನ್ನಾಗಿ ಸೇರಿಸಿಕೊಳ್ಳಲು ಬರುವುದಿಲ್ಲ.
4. ಒಬ್ಬ ಯಶಸ್ವಿನಿ ಸದಸ್ಯ ಒಂದು ಅವಿಭಕ್ತ ಕುಟುಂಬದ ಸದಸ್ಯರಾಗಿದ್ದು, ಅವಿಭಕ್ತ ಕುಟುಂಬದ ಎಲ್ಲಾ ಸದಸ್ಯರಿಗೆ ಒಂದೇ ರೇಷನ್ ಕಾರ್ಡ್ ಹೊಂದಿದ್ದು, ಅದನ್ನು ಹಾಜರುಪಡಿಸಿದ್ದಲ್ಲಿ ಅಂತಹ ರೇಷನ್ ಕಾರ್ಡ್‌ನಲ್ಲಿ ಹೆಸರು ನಮೂದಾಗಿರುವ ಅವಿಭಕ್ತ ಕುಟುಂಬದ ಎಲ್ಲಾ ಸದಸ್ಯರು ವಾರ್ಷಿಕ ವಂತಿಗೆ ಪಾವತಿಸಿದ್ದಲ್ಲಿ ಅಂತಹ ಕುಟುಂಬದ ಸದಸ್ಯರಿಗೆ ಯೋಜನೆ ಸೌಲಭ್ಯ ಪಡೆಯಲು ಸರ್ಕಾರವು ಅವಕಾಶ ಕಲ್ಪಿಸಿದೆ. ಅವಿಭಕ್ತ ಕುಟುಂಬದ ಸದಸ್ಯರಿಗೆ ಒಂದೇ ರೇಷನ್ ಕಾರ್ಡ್ ಇಲ್ಲದಿದ್ದಲ್ಲಿ ಈ ಯೋಜನೆಯಡಿ ನೋಂದಾಯಿಸಲು

ಅವಕಾಶವಿರುವುದಿಲ್ಲ.

5. ಮದುವೆಯಾಗಿರುವ ಹೆಣ್ಣು ಮಗಳು ಹಾಗೂ ಅವರ ಮಕ್ಕಳು ಅವರ ತವರು ಮನೆಯಲ್ಲಿ ಅಂದರೆ ಅವರ ತಂದೆ/ತಾಯಿ/ಅಣ್ಣ/ತಮ್ಮ ಪ್ರಧಾನ ಅರ್ಜಿದಾರರ ಕುಟುಂಬದಲ್ಲಿಯೇ ಯಾವುದೇ (ವಿಧವೆ/ವಿಚ್ಛೇದನ/ ಬೇರ್ಪಟ್ಟಿರುವುದು) ಕಾರಣಗಳಿಗೆ ವಾಸವಾಗಿದ್ದರೆ ಮತ್ತು ಅವರ ವಂತಿಗೆಯನ್ನು ಪ್ರಧಾನ ಅರ್ಜಿದಾರರು ಪಾವತಿಸಿದ್ದರೆ ಈ ಯೋಜನೆ ಸೌಲಭ್ಯ ಪಡೆಯಲು ಅರ್ಹರಾಗಿರುತ್ತಾರೆ.
6. ಆದಾಗ್ಯೂ ಮದುವೆಯಾಗಿರುವ ಹೆಣ್ಣು ಮಗಳು ತವರು ಮನೆಯ ಯಶಸ್ವಿನಿ ಕಾರ್ಡಿನಲ್ಲಿ ಆ ವರ್ಷದ ವಾರ್ಷಿಕ ವಂತಿಗೆ ಪಾವತಿಸಿ ಸದಸ್ಯರನ್ನಾಗಿ ನೋಂದಣಿ ಮಾಡಿಕೊಂಡಿದ್ದಲ್ಲಿ, ಅಂತಹ ಮದುವೆಯಾಗಿರುವ ಹೆಣ್ಣು ಮಗಳು ತವರು ಮನೆಯ ರೇಷನ್ ಕಾರ್ಡ್‌ನಲ್ಲಿ ತಮ್ಮ ಹೆಸರು ಇರುವ ಬಗ್ಗೆ ರೇಷನ್ ಕಾರ್ಡ್ ಪ್ರತಿಯನ್ನು ಹಾಜರುಪಡಿಸಿದ್ದಲ್ಲಿ ಯೋಜನೆಯ ಸೌಲಭ್ಯ ಪಡೆಯಲು ಅರ್ಹರಿರುತ್ತಾರೆ. ಒಂದು ವೇಳೆ ತವರು ಮನೆಯವರು ರೇಷನ್ ಕಾರ್ಡ್ ಹೊಂದಿಲ್ಲದಿದ್ದರೆ ಸಂಬಂಧಿಸಿದ ಸಹಕಾರ ಸಂಘದಿಂದ ಮದುವೆಯಾಗಿರುವ ಹೆಣ್ಣುಮಗಳು ತವರು ಮನೆಯಲ್ಲಿ ಇರುವ ಬಗ್ಗೆ ದೃಢೀಕರಿಸಬೇಕು. ಇಲ್ಲದಿದ್ದಲ್ಲಿ ಅಂತಹ ಹೆಣ್ಣುಮಗಳು ತವರು ಮನೆಯಲ್ಲಿನ ಯಶಸ್ವಿನಿ ಯೋಜನೆಗೆ ಅರ್ಹರಿರುವುದಿಲ್ಲ.
7. ನವಜಾತ ಶಿಶು ತಾಯಿ ಹೆಸರು ಇರುವ ಯಶಸ್ವಿನಿ ಕಾರ್ಡ್‌ನ ಆಧಾರದ ಮೇಲೆ ಈ ಯೋಜನೆಯಡಿಯಲ್ಲಿ ಸೌಲಭ್ಯವನ್ನು ಮುಂದಿನ ವರ್ಷ ನೋಂದಣಿಯಾಗುವವರೆಗೆ ಪಡೆಯಬಹುದು, ನಂತರದಲ್ಲಿ ಮಗುವಿನ ಹೆಸರನ್ನು ನೋಂದಾಯಿಸಿಕೊಂಡು ಯೋಜನೆಯ ಸೌಲಭ್ಯ ಪಡೆಯಬಹುದು.
8. ಮೇಲೆ ವಿವರಿಸಿರುವಂತೆ ಅರ್ಹ ಸದಸ್ಯರನ್ನು ಹೊರತುಪಡಿಸಿ ಬೇರೆ ಯಾವುದೇ ಸದಸ್ಯರನ್ನು ಯಶಸ್ವಿನಿ ಯೋಜನೆಗೆ ಸೇರಿಸುವಂತಿಲ್ಲ. ಒಂದು ವೇಳೆ ಸುಳ್ಳು ಮಾಹಿತಿ ನೀಡಿ ಅಕ್ರಮವಾಗಿ ಅರ್ಜಿದಾರ ಅಥವಾ ಸಹಕಾರ ಸಂಘದ ಮುಖ್ಯಕಾರ್ಯನಿರ್ವಹಣಾಧಿಕಾರಿಯ ತಪ್ಪಿನಿಂದಾಗಲಿ ಅರ್ಹರಲ್ಲದ ಸದಸ್ಯರಿಂದ ವಂತಿಗೆ ಪಾವತಿಸಿಕೊಂಡು ಅಂತಹ ವ್ಯಕ್ತಿಗಳನ್ನು ಗೊತ್ತಿದ್ದೋ ಅಥವಾ ಗೊತ್ತಿಲ್ಲದೆಯೋ ನೋಂದಣಿ ಮಾಡಿದ್ದರೂ ಸಹ ಅಂತಹ ವ್ಯಕ್ತಿಗಳು ಯೋಜನೆಯ ಸೌಲಭ್ಯ ಪಡೆಯಲು ಅರ್ಹರಾಗುವುದಿಲ್ಲ ಹಾಗೂ ಅಂತಹ ವ್ಯಕ್ತಿಗಳು ಪಾವತಿಸಿದ ವಂತಿಗೆ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಮತ್ತು ಅವರ ಯಶಸ್ವಿನಿ ಸದಸ್ಯತ್ವ ತಂತಾನೇ ರದ್ದುಗೊಳ್ಳುತ್ತದೆ. ಪ್ರತ್ಯೇಕ ರದ್ದತಿ ಆದೇಶ ಅವಶ್ಯಕತೆ ಇರುವುದಿಲ್ಲ.
9. 2025–26ನೇ ಸಾಲಿನಲ್ಲಿ 50.00ಲಕ್ಷ ಸದಸ್ಯರನ್ನು ನೋಂದಾಯಿಸುವ ಗುರಿ ನಿಗದಿಪಡಿಸಲಾಗಿದೆ. ಪ್ರತಿ ಜಿಲ್ಲೆಯ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಗುರಿ ನಿಗದಿಪಡಿಸಲಾಗಿದೆ. ಜಿಲ್ಲಾವಾರು ಗುರಿಯನ್ನು ಅನುಬಂಧದಲ್ಲಿ ನೀಡಲಾಗಿದೆ. ಹಿಂದಿನ ಸಾಲು ಅಂದರೆ 2024–25ನೇ ಸಾಲಿನಲ್ಲಿ ನೋಂದಾಯಿಸಿದ್ದ ಎಲ್ಲಾ ಸದಸ್ಯರನ್ನು 2025–26ನೇ ಸಾಲಿಗೆ ನವೀಕರಿಸಲು ಕ್ರಮವಿಡತಕ್ಕದ್ದು.
10. ರಾಜ್ಯದಲ್ಲಿ ಕೆಲವು ಹಾಲು ಉತ್ಪಾದಕರ ಒಕ್ಕೂಟಗಳು, ಡಿಸಿಸಿ ಬ್ಯಾಂಕುಗಳು ಹಾಗೂ ಸಹಕಾರ ಸಂಘ/ಸಂಸ್ಥೆಗಳು ಅವುಗಳ ಸದಸ್ಯರ ವಾರ್ಷಿಕ ಯಶಸ್ವಿನಿ ವಂತಿಗೆಯನ್ನು ಭಾಗಶಃ ಅಥವಾ ಪೂರ್ಣ ವಂತಿಗೆಯನ್ನು ಸಂಘದ ಸ್ವಂತ ಬಂಡವಾಳದಿಂದ ಭರಿಸುತ್ತಿವೆ. ಈ ಪದ್ಧತಿಯನ್ನು ರಾಜ್ಯದ ಎಲ್ಲಾ ಸಹಕಾರ ಸಂಘಗಳೂ ಕೂಡ ಅನುಸರಿಸುವಂತೆ ಪ್ರೋತ್ಸಾಹಿಸತಕ್ಕದ್ದು.

**11. 2025–26ನೇ ಸಾಲಿಗೆ ಈ ಯೋಜನೆಯಡಿ**

(ಎ) ಗ್ರಾಮೀಣ ಸಹಕಾರ ಸಂಘಗಳ/ಸ್ವ–ಸಹಾಯ ಗುಂಪುಗಳ ಗರಿಷ್ಠ ನಾಲ್ಕು ಸದಸ್ಯರ ಕುಟುಂಬ ಒಂದಕ್ಕೆ ವಾರ್ಷಿಕ ರೂ. 500/–ಗಳ ವಂತಿಗೆ ಮತ್ತು ನಾಲ್ಕಕ್ಕಿಂತ ಹೆಚ್ಚಿನ ಸದಸ್ಯರುಗಳ ಕುಟುಂಬದ ಪ್ರತಿಯೊಬ್ಬ ಹೆಚ್ಚುವರಿ ಸದಸ್ಯರಿಗೆ ರೂ.100/– ಗಳನ್ನು ಪಾವತಿಸತಕ್ಕದ್ದು.

(ಬಿ) ನಗರ ಸಹಕಾರ ಸಂಘಗಳ ಗರಿಷ್ಠ ನಾಲ್ಕು ಸದಸ್ಯರ ಕುಟುಂಬ ಒಂದಕ್ಕೆ ವಾರ್ಷಿಕ ರೂ.1000/–ಗಳ ವಂತಿಗೆ ಮತ್ತು ನಾಲ್ಕಕ್ಕಿಂತ ಹೆಚ್ಚಿನ ಸದಸ್ಯರುಗಳ ಕುಟುಂಬದ ಪ್ರತಿಯೊಬ್ಬ ಹೆಚ್ಚುವರಿ ಸದಸ್ಯರಿಗೆ ರೂ.200/–ಗಳನ್ನು ಪಾವತಿಸತಕ್ಕದ್ದು.

(ಸಿ) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಸದಸ್ಯರುಗಳಿಗೆ ವಿಶೇಷ ಘಟಕ ಯೋಜನೆ ಹಾಗೂ ಗಿರಿಜನ ಉಪ ಯೋಜನೆಯಡಿ ಸಹಾಯ ಧನ ನೀಡುವ ಮೂಲಕ ಅವರ ವಾರ್ಷಿಕ ಸದಸ್ಯತ್ವದ ವಂತಿಕೆಯನ್ನು ಸರ್ಕಾರವೇ ಭರಿಸುತ್ತದೆ. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿವರಗಳನ್ನು ಸರ್ಕಾರಕ್ಕೆ ಕಡ್ಡಾಯವಾಗಿ ಸಲ್ಲಿಸಬೇಕಾಗಿರುವುದರಿಂದ ಈ ಸಮುದಾಯಗಳಿಗೆ ಸಂಬಂಧಿಸಿದಂತೆ ಜಾತಿ ಪ್ರಮಾಣ ಪತ್ರದಲ್ಲಿರುವ ಆರ್.ಡಿ. ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು. ಆರ್‌ಡಿ ಸಂಖ್ಯೆಗಳು ಒದಗಿಸದಿದ್ದಲ್ಲಿ ಯಶಸ್ವಿನಿ ಕಾರ್ಡ್‌ನ್ನು ಒದಗಿಸಲು ಸಾಧ್ಯವಾಗುವುದಿಲ್ಲ ಮತ್ತು ಸರ್ಕಾರದಿಂದ ಅನುದಾನ ಸೌಲಭ್ಯ ದೊರೆಯುವುದಿಲ್ಲ.

(ಡಿ) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಸದಸ್ಯರಿಂದ ಯಾವುದೇ ವಂತಿಗೆಯನ್ನು ಪಾವತಿಸಿಕೊಳ್ಳದಿರುವುದರಿಂದ ಈ ಸಮುದಾಯದ ಸದಸ್ಯರನ್ನು ಒಂದೇ ಬಾರಿ ಮೂರು ವರ್ಷಗಳ ಅವಧಿಗೆ ನೋಂದಾಯಿಸಿಕೊಂಡು ಅದರಂತೆ ಮೂರು ವರ್ಷಗಳ ಅವಧಿಗೆ ಕಾರ್ಡುಗಳನ್ನು ವಿತರಿಸಲಾಗುವುದು. ಸದರಿ ಕಾರ್ಡುಗಳಲ್ಲಿ ಯಾವುದೇ ತಿದ್ದುಪಡಿ/ಬದಲಾವಣೆ ಹಾಗೂ ಹೊಸ ಸದಸ್ಯರ ಸೇರ್ಪಡೆ/ತೆಗೆದು ಹಾಕುವುದು ಇದ್ದಲ್ಲಿ ಅದರಂತೆ ಪ್ರತಿವರ್ಷ ತಿದ್ದುಪಡಿ/ಬದಲಾವಣೆಗೆ ಕ್ರಮವಿಡಲಾಗುವುದು. ಪ್ರತಿವರ್ಷ ಆ ಸಮುದಾಯದ ಸದಸ್ಯರ ವಂತಿಗೆಯನ್ನು ಸರ್ಕಾರದಿಂದ ಭರಿಸಲಾಗುವುದು.

(ಇ) ಸದಸ್ಯರಿಂದ ಸಂಗ್ರಹಿಸಿದ ವಂತಿಗೆ ಮೊತ್ತದ ಪೈಕಿ (ಸದಸ್ಯರಿಂದ ಇದಕ್ಕಾಗಿ ಹೆಚ್ಚುವರಿ ಮೊತ್ತ ಸಂಗ್ರಹಿಸತಕ್ಕದ್ದಲ್ಲ) ಪ್ರತಿ ಕಾರ್ಡಿಗೆ ರೂ.25/– ಗಳನ್ನು ಸಹಕಾರ ಸಂಘಗಳು ಪ್ರೋತ್ಸಾಹಧನವಾಗಿ ಇಟ್ಟುಕೊಂಡು ಉಳಿದ ಮೊತ್ತವನ್ನು ಸದಸ್ಯತ್ವ ನೋಂದಣಿಯಾದ ಏಳು (7) ದಿನಗಳೊಳಗಾಗಿ ಸಂಬಂಧಿಸಿದ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಲ್ಲಿ ಯಶಸ್ವಿನಿ ಟ್ರಸ್ಟ್ ಹೊಂದಿರುವ ಖಾತೆಗೆ ಜಮಾ ಮಾಡತಕ್ಕದ್ದು. ಕೇಂದ್ರ ಜಿಲ್ಲಾ ಸಹಕಾರ ಬ್ಯಾಂಕುಗಳು ಜಮಾ ಆಗಿರುವ ವಂತಿಕೆ ಮೊತ್ತವನ್ನು ಸ್ವೀಕರಿಸಿದ ಎರಡು (2) ದಿನಗಳೊಳಗಾಗಿ ಅಪೆಕ್ಸ್ ಬ್ಯಾಂಕಿನ ಕೇಂದ್ರ ಕಛೇರಿಯಲ್ಲಿ ಹೊಸದಾಗಿ ತೆರೆದಿರುವ ಯಶಸ್ವಿನಿ ಟ್ರಸ್ಟ್‌ನ ಉಳಿತಾಯ ಖಾತೆಗೆ ಜಮಾ ಮಾಡತಕ್ಕದ್ದು/ವರ್ಗಾಯಿಸತಕ್ಕದ್ದು.

(ಎಫ್) ಸದಸ್ಯರನ್ನು ನೋಂದಾಯಿಸುವ ಸಹಕಾರ ಸಂಘ/ಬ್ಯಾಂಕುಗಳು ಸದಸ್ಯರಿಂದ ಸಂಗ್ರಹಿಸಿದ ವಂತಿಗೆಯನ್ನು ಆ ಜಿಲ್ಲೆಯ ಡಿಸಿಸಿ ಬ್ಯಾಂಕ್ ಮೂಲಕವೇ ಸಂದಾಯ ಮಾಡಬೇಕು. ಯಾವುದೇ ಕಾರಣಕ್ಕೆ ನೇರವಾಗಿ ಅಪೆಕ್ಸ್ ಬ್ಯಾಂಕಿನಲ್ಲಿರುವ ಟ್ರಸ್ಟ್ ಖಾತೆಗೆ ಪಾವತಿಸತಕ್ಕದ್ದಲ್ಲ.

(ಜಿ) ಕೆಲವೊಂದು ಸಹಕಾರ ಸಂಘಗಳು ಸದಸ್ಯರ ವಂತಿಗೆ ಮೊತ್ತವನ್ನು ಮೊದಲು ಡಿಸಿಸಿ ಬ್ಯಾಂಕಿಗೆ ಪಾವತಿಸಿ ನಂತರ ಸದಸ್ಯರ ಅರ್ಜಿ ಫಾರಂಗಳನ್ನು ಸಿಡಿಓ ಗಳಿಗೆ ಸಲ್ಲಿಸುತ್ತಿರುವುದು ಕಂಡುಬರುತ್ತಿದೆ. ಕೆಲವೊಂದು ವೇಳೆ ವಂತಿಗೆ ಮೊತ್ತ ಪಾವತಿಯಾಗಿದ್ದರೂ ಅದಕ್ಕೆ ಅನುಗುಣವಾಗಿ ಸದಸ್ಯತ್ವದ ಅರ್ಜಿ ಬರುವುದಿಲ್ಲ. ಇದರಿಂದ ಸದಸ್ಯತ್ವದ ಅರ್ಜಿಗಳು ಸದಸ್ಯರ ವಿವರಗಳು ಮತ್ತು ಸಂಗ್ರಹಿಸಿದ ವಂತಿಗೆ ಮೊತ್ತ ತಾಳೆಯಾಗುವುದಿಲ್ಲ ಮತ್ತು Reconciliationಗೂ ಸಮಸ್ಯೆಯಾಗುತ್ತಿರುವುದಲ್ಲದೆ, ಸದಸ್ಯರಿಗೆ ಸಮಯಕ್ಕೆ ಸರಿಯಾಗಿ ಕಾರ್ಡ್ ವಿತರಿಸಲು ಸಮಸ್ಯೆಯಾಗುತ್ತದೆ. ಆದುದರಿಂದ ಸದಸ್ಯರ ಅರ್ಜಿ ಫಾರಂಗಳು ಸ್ವೀಕರಿಸಿ, ಸದಸ್ಯರ ವಿವರ, ವಂತಿಕೆ ಮೊತ್ತ ತಾಳೆ ಮಾಡಿಸಿಕೊಂಡು ಅರ್ಜಿಗಳನ್ನು ಸಿಡಿಓಗೆ ವರ್ಗಾಯಿಸಿದ ನಂತರ ವಂತಿಕೆ ಮೊತ್ತವನ್ನು ಡಿಸಿಸಿ ಬ್ಯಾಂಕಿಗೆ ಪಾವತಿಸಲು ಕ್ರಮವಿಡತಕ್ಕದ್ದು.

**12. 2025–26ನೇ ಸಾಲಿಗೆ ನೋಂದಣಿ ದಿನಾಂಕ : 03–1–2026 ರಿಂದ ಪ್ರಾರಂಭವಾಗಲಿದ್ದು, ದಿನಾಂಕ : 31–03–2026ರವರೆಗೆ ಮುಂದುವರೆಯಲಿದೆ.**

**13. 2025–26ನೇ ಸಾಲಿನಲ್ಲಿ ಚಿಕಿತ್ಸಾ ಅವಧಿಯನ್ನು ದಿನಾಂಕ : 1.4.2026 ರಿಂದ 31.3.2027 ರವರೆಗೆ ನಿಗದಿಗೊಳಿಸಿದೆ.**

14. ಯಶಸ್ವಿನಿ ಯೋಜನೆಯಡಿ ಸದಸ್ಯರಿಗೆ ಯೂನಿಕ್ ಐಡಿ ಸಂಖ್ಯೆಯುಳ್ಳ ಪ್ಲಾಸ್ಟಿಕ್ ಕಾರ್ಡ್‌ನ್ನು ದಿನಾಂಕ : 1.3.2026 ರಿಂದ ಒದಗಿಸಲಾಗುವುದು. ಸದರಿ ಕಾರ್ಡ್‌ನ್ನು ಹಾಜರುಪಡಿಸಿ ದಿನಾಂಕ : 1.4.2026 ರಿಂದ ಫಲಾನುಭವಿಗಳು ನಗದು ರಹಿತ ಚಿಕಿತ್ಸೆಗಳನ್ನು ಪಡೆಯಬಹುದಾಗಿದೆ. ಗುರುತಿನ ಚೀಟಿಯನ್ನು ಚಿಕಿತ್ಸೆಗಾಗಿ ನೆಟ್‌ವರ್ಕ್ ಆಸ್ಪತ್ರೆಗಳಿಗೆ ಭೇಟಿ ನೀಡಿದ ಸಮಯದಲ್ಲಿ ಫಲಾನುಭವಿಗಳು ಕಡ್ಡಾಯವಾಗಿ ಹಾಜರುಪಡಿಸಬೇಕು. ಇಲ್ಲದಿದ್ದಲ್ಲಿ ಆಸ್ಪತ್ರೆಗಳು ಯಶಸ್ವಿನಿ ಯೋಜನೆಯಡಿ ಚಿಕಿತ್ಸೆಯನ್ನು ನಿರಾಕರಿಸುತ್ತವೆ. ಇದಕ್ಕೆ ಟ್ರಸ್ಟ್ ಜವಾಬ್ದಾರಿಯಾಗುವುದಿಲ್ಲ. ಆದಾಗ್ಯೂ ಸದಸ್ಯರು ಯಶಸ್ವಿನಿ ಯೋಜನೆಯಡಿಯಲ್ಲಿ ನೋಂದಣಿಯಾಗಿದ್ದು, ಅರ್ಜಿ ಸ್ಕ್ಯಾನ್ ಆಗಿದ್ದು, ತುರ್ತಾಗಿ ಆಸ್ಪತ್ರೆಗೆ ದಾಖಲಾಗಬೇಕಾದ ಸಂದರ್ಭ ಬಂದಲ್ಲಿ ಕಾರ್ಡ್ ಇನ್ನೂ ಬರದಿದ್ದಲ್ಲಿ ಅಂತಹ ಫಲಾನುಭವಿಗಳು ನೋಂದಣಿಯಾಗಿರುವ ಬಗ್ಗೆ ಸಹಕಾರ ಸಂಘದ ಮೂಲಕ ಪುರಾವೆ/ದಾಖಲೆ ಒದಗಿಸಿದ್ದಲ್ಲಿ ಸದಸ್ಯರಿಗೆ ತುರ್ತಾಗಿ ಟ್ರಸ್ಟ್ ಕಡೆಯಿಂದ ತಾತ್ಕಾಲಿಕ ಇ–ಕಾರ್ಡ್‌ನ್ನು ಒದಗಿಸಿ, ಚಿಕಿತ್ಸೆಗೆ ಅನುವು ಮಾಡಿಕೊಡಲಾಗುವುದು.

15. ಯಶಸ್ವಿನಿ ಕಾರ್ಡನ್ನು ಫಲಾನುಭವಿಗಳು ಜೋಪಾನವಾಗಿ ಇಟ್ಟುಕೊಳ್ಳತಕ್ಕದು. ಒಂದು ವೇಳೆ ಕಾರ್ಡ್‌ನ್ನು ಕಳೆದು ಕೊಂಡಲ್ಲಿ ರೂ.250/–ಗಳ ಶುಲ್ಕವನ್ನು ಟ್ರಸ್ಟ್‌ಗೆ ಪಾವತಿಸಿ ಜಿಲ್ಲೆಯ ಸಹಕಾರ ಸಂಘಗಳ ಉಪ ನಿಬಂಧಕರ ಮೂಲಕ ಟ್ರಸ್ಟ್‌ಗೆ ಮನವಿ ಸಲ್ಲಿಸಿ ಡೂಪ್ಲಿಕೇಟ್ ಕಾರ್ಡ್‌ನ್ನು ಪಡೆಯಬಹುದು. ಡೂಪ್ಲಿಕೇಟ್ ಕಾರ್ಡ್ ವಿತರಣೆಯಾದ ನಂತರ ಹಳೆಯ ಕಾರ್ಡ್‌ನ್ನು ಸ್ಥಗಿತಗೊಳಿಸಲಾಗುವುದು.

**16. ಈ ಕೆಳಕಂಡ ಸೌಲಭ್ಯಗಳನ್ನು ಯಶಸ್ವಿನಿ ಸದಸ್ಯರಿಗೆ ಒದಗಿಸಲಾಗುವುದು.**

ಎ) ಪ್ರಸ್ತುತ ಯಶಸ್ವಿನಿ ಯೋಜನೆಯಡಿಯಲ್ಲಿ ಟ್ರಸ್ಟ್ ಗುರುತಿಸಿದ 1650 ವಿವಿಧ ಚಿಕಿತ್ಸೆಗಳು ಮತ್ತು 478 ಐಸಿಯು ಚಿಕಿತ್ಸೆಗಳು ಸೇರಿದಂತೆ ಒಟ್ಟು 2128 ಚಿಕಿತ್ಸೆಗಳನ್ನು ಅಳವಡಿಸಿಕೊಳ್ಳಲಾಗಿದೆ.

ಬಿ) ರೋಗಿಗಳಿಗೆ ಸದರಿ ಚಿಕಿತ್ಸಾ ಸೌಲಭ್ಯಗಳನ್ನು ರಾಜ್ಯದಲ್ಲಿ ನೋಂದಾಯಿಸಿದ ಯಶಸ್ವಿನಿ ನೆಟ್‌ವರ್ಕ್ ಆಸ್ಪತ್ರೆಗಳಲ್ಲಿ ಒದಗಿಸಲಾಗುವುದು. ನೆಟ್‌ವರ್ಕ್ ಆಸ್ಪತ್ರೆಗಳನ್ನು ಹೊರತುಪಡಿಸಿ, ಇತರೆ ಆಸ್ಪತ್ರೆಗಳಲ್ಲಿ ಯಶಸ್ವಿನಿ ಯೋಜನೆಯ ಸೇವೆ ಲಭ್ಯವಿರುವುದಿಲ್ಲ. ಯಶಸ್ವಿನಿ ಯೋಜನೆಯಡಿ ಫಲಾನುಭವಿ ಚಿಕಿತ್ಸೆ ಪಡೆಯುವ ಮೂಲಕ ಆಸ್ಪತ್ರೆಯು ಯೋಜನೆಗೆ ಒಳಪಟ್ಟಿರುವ ಬಗ್ಗೆ ಖಾತ್ರಿ ಪಡಿಸಿಕೊಂಡು ನಂತರ ಚಿಕಿತ್ಸೆ ಪಡೆಯತಕ್ಕದ್ದು.

ಸಿ) ಯೋಜನೆಯಲ್ಲಿ ಒಳಪಡದ ಚಿಕಿತ್ಸೆಗಳ ಮತ್ತು ಟ್ರಸ್ಟ್ ಅಂಗೀಕರಿಸದ ಆಸ್ಪತ್ರೆಗಳಲ್ಲಿ ಪಡೆದಂತಹ ಚಿಕಿತ್ಸೆಗಳಿಗೆ ಯಶಸ್ವಿನಿ ಟ್ರಸ್ಟ್ ಜವಾಬ್ದಾರರಾಗುವುದಿಲ್ಲ ಹಾಗೂ ಯಾವುದೇ ಕಾರಣಕ್ಕೂ ಆಸ್ಪತ್ರೆಗಳಿಗಾಗಲಿ ಅಥವಾ ಫಲಾನುಭವಿಗಳಿಗಾಗಲಿ ಚಿಕಿತ್ಸಾ ವೆಚ್ಚವನ್ನು ಪಾವತಿಸಲಾಗುವುದಿಲ್ಲ.

ಡಿ) ಎರಡು ಜೀವಂತ ಮಕ್ಕಳು ಅಥವಾ ಎರಡು ಹೆರಿಗೆಗೆ ಮಾತ್ರ ಯಶಸ್ವಿನಿ ಯೋಜನೆಯಲ್ಲಿ ಸೌಲಭ್ಯ ದೊರೆಯುತ್ತದೆ.

ಇ) ಯಶಸ್ವಿನಿ ಯೋಜನೆಯ ಪ್ರೋಟೋಕಾಲ್ ಪ್ರಕಾರ ಯಶಸ್ವಿನಿ ಫಲಾನುಭವಿಗಳು ಜನರಲ್ ವಾರ್ಡ್‌ನಲ್ಲಿ ಮಾತ್ರ ಚಿಕಿತ್ಸೆ ಪಡೆಯಲು ಅರ್ಹರಿರುತ್ತಾರೆ. ಒಂದು ವೇಳೆ ಯೋಜನೆಯಡಿ ನಿಗದಿಪಡಿಸಿರುವ ಜನರಲ್ ವಾರ್ಡ್‌ಗೆ ಬದಲಾಗಿ ಉನ್ನತ ವಾರ್ಡ್ (Semi Special Ward or Special Ward)ನಲ್ಲಿ ಚಿಕಿತ್ಸೆ ಪಡೆಯಲು ಇಚ್ಛಿಸಿದಲ್ಲಿ, ಸದರಿ ಫಲಾನುಭವಿಗಳಿಗೆ ಯೋಜನೆಯಡಿ ನಿಗದಿಪಡಿಸಿರುವಂತೆ ಜನರಲ್ ವಾರ್ಡ್‌ಗೆ ಅನ್ವಯಿಸುವ ಚಿಕಿತ್ಸೆಯ ವೆಚ್ಚವನ್ನು ಮಾತ್ರ ಭರಿಸಲಾಗುವುದು. ಉನ್ನತ ವಾರ್ಡ್/ಸ್ಪೆಷಲ್ ವಾರ್ಡ್‌ಗೆ ಆಗುವ ಹೆಚ್ಚುವರಿ ವ್ಯತ್ಯಾಸದ ಚಿಕಿತ್ಸಾ ಮೊತ್ತವನ್ನು ಸದರಿ ಫಲಾನುಭವಿಗಳೇ ಭರಿಸತಕ್ಕದ್ದು.

ಎಫ್)ಯಶಸ್ವಿನಿ ಯೋಜನೆಯ ಪ್ಯಾಕೇಜಿನಲ್ಲಿ Implants ಅಗತ್ಯವಿರುವ ಕಡೆ Implants ದರವನ್ನು ಒಳಗೊಂಡಿರುತ್ತದೆ. (Ex: Knee replacement lense in cataract surgery) ಒಂದು ವೇಳೆ ಫಲಾನುಭವಿಗಳು ಉನ್ನತ Implant ಅಥವಾ lense ಪಡೆಯಲು ಸ್ವ–ಇಚ್ಛೆಯಿಂದ ಒಪ್ಪಿಗೆ ಸೂಚಿಸಿದಲ್ಲಿ, ಅಂತಹ ಉನ್ನತ Implants ಮತ್ತು lenseಗೆ ತಗಲುವ ವ್ಯತ್ಯಾಸದ ಹೆಚ್ಚುವರಿ ಮೊತ್ತವನ್ನು ಅಂತಹ ಫಲಾನುಭವಿಗಳೇ ಭರಿಸಿ ಚಿಕಿತ್ಸೆಯನ್ನು ಪಡೆಯತಕ್ಕದ್ದು.

ಜಿ) ನೆಟ್‌ವರ್ಕ್ ಆಸ್ಪತ್ರೆಗಳಲ್ಲಿ ಯಶಸ್ವಿನಿ ಸದಸ್ಯರಿಗೆ ಹೊರ ರೋಗಿ ಚಿಕಿತ್ಸೆಗೆ (OPD) ಗರಿಷ್ಠ ರೂ.200/–ಗಳನ್ನು (ಮೂರು ತಿಂಗಳ ಅವಧಿಗೆ) ಮಿತಿ ನಿಗಧಿಪಡಿಸಿದ್ದು, ಈ ಪೈಕಿ ರೂ.100/–ಗಳನ್ನು ಯಶಸ್ವಿನಿ ಟ್ರಸ್ಟ್ ವತಿಯಿಂದ ಪಾವತಿಸಲಾಗುವುದು.

17. ಸದಸ್ಯರ ನೋಂದಣಿಗೆ ಮಾರ್ಗಸೂಚಿಗಳು, ಯಶಸ್ವಿನಿ ನೆಟ್‌ವರ್ಕ್ ಆಸ್ಪತ್ರೆಗಳ ಯಾದಿ, ಶಸ್ತ್ರಚಿಕಿತ್ಸೆಗಳ ಯಾದಿ, ಇವುಗಳನ್ನು ಸಹಕಾರ ಇಲಾಖೆಯ ಸಹಕಾರ ಸಿಂಧು ವೆಬ್‌ಸೈಟ್‌ನಲ್ಲಿ/ಟ್ರಸ್ಟ್ ವೆಬ್‌ಸೈಟ್‌ನಲ್ಲೂ ಅಪ್‌ಲೋಡ್ ಮಾಡಲಾಗುವುದು.

18. ಸದಸ್ಯರು ಕಡ್ಡಾಯವಾಗಿ ಮೊಬೈಲ್ ಸಂಖ್ಯೆ ಮತ್ತು ಆಧಾರ್ ಕಾರ್ಡ್ ಒದಗಿಸತಕ್ಕದು.

19. ಯಶಸ್ವಿನಿ ಯೋಜನೆಯ ಮಾರ್ಗಸೂಚಿಗಳ ಬಗ್ಗೆ ತಿಳುವಳಿಕೆ ನೀಡಲು ಆಯಾ ಪ್ರಾಂತ್ಯದ ಸಹಕಾರ ಸಂಘಗಳ ಜಂಟಿ ನಿಬಂಧಕರು ಅವರ ವ್ಯಾಪ್ತಿಯ ಇಲಾಖಾಧಿಕಾರಿಗಳ, ಜಿಲ್ಲಾ ಸಹಕಾರ ಬ್ಯಾಂಕುಗಳ, ಹಾಲು ಉತ್ಪಾದಕರ ಸಂಘಗಳ ಒಕ್ಕೂಟಗಳ ಮತ್ತು ಇತರೆ ಪ್ರಮುಖ ಸಹಕಾರ ಸಂಘ/ಸಂಸ್ಥೆಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಸಭೆಯನ್ನು ಪ್ರಾಂತೀಯ ಮಟ್ಟದಲ್ಲಿ ನಿರ್ವಹಿಸಲು ಸೂಚಿಸಿದೆ. ನಂತರ ಎಲ್ಲಾ ಜಿಲ್ಲಾ ಸಹಕಾರ ಸಂಘಗಳ ಉಪ ನಿಬಂಧಕರು, ಅವರ ಜಿಲ್ಲೆಯ ಸಹಕಾರ ಸಂಘಗಳ ಅಧ್ಯಕ್ಷರ, ಮುಖ್ಯಕಾರ್ಯನಿರ್ವಹಣಾಧಿಕಾರಿ ರವರ ಮತ್ತು ಸಂಬಂಧಿಸಿದ ಇಲಾಖಾಧಿಕಾರಿಗಳ ಸಭೆ ಕರೆದು ಕಾರ್ಯಗಾರ ಏರ್ಪಡಿಸಿ ಯೋಜನೆಯ ಮಾರ್ಗಸೂಚಿ ನಿಯಮಗಳು, ಇತಿಮಿತಿಗಳು ಮತ್ತು ಯೋಜನೆಯಡಿ ಸೌಲಭ್ಯದ ವಿವರಗಳ ಮಾಹಿತಿ ನೀಡಿ, ತೆಗೆದುಕೊಂಡ ಕ್ರಮದ ಬಗ್ಗೆ ವರದಿಯನ್ನು ನಿಬಂಧಕರಿಗೆ ಮತ್ತು ಸರ್ಕಾರಕ್ಕೆ ಸಲ್ಲಿಸಲು ಸೂಚಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 113 ವೆಚ್ಚ–2/2022, ದಿನಾಂಕ: 12–11–2025 ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಿದೆ.

**ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ**
**ಸಹಿ/–**
**ರಂಗನಾಥ ಜಿ.**
**ಸರ್ಕಾರದ ಅಧೀನ ಕಾರ್ಯದರ್ಶಿ–3**
**ಸಹಕಾರ ಇಲಾಖೆ**



### 25 ವರ್ಷಗಳ ಸಾರ್ಥಕ – ಸಂತೃಪ್ತ ಸೇವೆ :

### 50 ಶಾಖೆಗಳು : 327 ಜನರಿಗೆ ಉದ್ಯೋಗವಕಾಶ – ಮಾದರಿ ಸಹಕಾರ ಸಂಘ

### ತಂತ್ರಜ್ಞಾನ ಆಧಾರಿತ ಸೇವೆ, ಸದಸ್ಯರಿಗೆ ಆರ್ಥಿಕ ನೆರವು

# ಪ್ರಗತಿ ಪಥದಲ್ಲಿ ಶ್ರೀ ಶಾಂತೇಶ್ವರ ವಿವಿಧೋದ್ದೇಶಗಳ ಸಹಕಾರ ಸಂಘ ನಿ., ಹೊರ್ತಿ

ಭಾರತದಲ್ಲಿ ಸಹಕಾರ ಚಳವಳಿಗೆ 121 ವರ್ಷಗಳ ಸುದೀರ್ಘ ಇತಿಹಾಸವಿದೆ. ವಿಶ್ವದಲ್ಲಿಯೇ ಅತ್ಯಂತ ಬೃಹತ್ತಾದ ಸಹಕಾರ ಚಳವಳಿಯನ್ನು ಹೊಂದಿದ ರಾಷ್ಟ್ರ ನಮ್ಮದು. ಸಹಕಾರ ಸಂಸ್ಥೆಗಳು ದೇಶದ ಆರ್ಥಿಕ ಸುಸ್ಥಿರತೆಗೆ ಅಪಾರ ಕೊಡುಗೆಯನ್ನು ನೀಡುತ್ತಿವೆ. ಸಹಕಾರ ತತ್ವ ಮತ್ತು ಆಚರಣೆಯ ಕಾರ್ಯ ವ್ಯಾಪ್ತಿಯಲ್ಲಿ ಸಂಘಟಿತಗೊಂಡ ಸಹಕಾರ ಸಂಸ್ಥೆಗಳು ಅದಮ್ಯ ಚೈತನ್ಯದೊಂದಿಗೆ ಸದಸ್ಯರ ಅಗತ್ಯಗಳನ್ನು ಪೂರೈಸುವ ಮೂಲಕ ಬದ್ಧತೆಯ ಸೇವೆಯಲ್ಲಿ ತೊಡಗಿದೆ.

ನಮ್ಮ ರಾಜ್ಯದಲ್ಲಿ ಸಹಕಾರ ಚಳವಳಿಯು 50 ವಿವಿಧ ವಲಯಗಳನ್ನು ಹೊಂದಿದ್ದು, ಸದಸ್ಯ ಸೇವೆಗಳನ್ನು ನೀಡುವಲ್ಲಿ ಯಶಸ್ಸನ್ನು ಸಾಧಿಸಿದೆ. ವಿವಿಧೋದ್ದೇಶಗಳ ಸಹಕಾರ ವಲಯವು ಸಹಕಾರ ಚಳವಳಿಯ ಬಹು ಮುಖ್ಯವಾದ ಅಂಗವಾಗಿದ್ದು, ವಿಶೇಷತೆಯನ್ನು ಪಡೆದುಕೊಂಡಿದೆ. ಸಹಕಾರದ ನಿಜ ಅರ್ಥದಲ್ಲಿ ಸ್ವಾತಂತ್ರ್ಯ, ಸ್ವಾವಲಂಬಿ, ಸ್ವಾಯತ್ತತೆಯ ಮೂಲಕ ಪತ್ತಿನ ವಲಯ ಉತ್ತಮವಾದ ಸೇವೆಯನ್ನು ಸದಸ್ಯರುಗಳಿಗೆ ನೀಡುವ ಮೂಲಕ ಸದಸ್ಯರುಗಳಿಗೆ ಆರ್ಥಿಕ ನೆರವು ನೀಡಿ ಅವರಿಗೆ ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು ನೆರವಾಗಿದೆ. ತಮ್ಮ ಸದಸ್ಯರಿಂದಲೇ ಠೇವಣಿಗಳನ್ನು ಸಂಗ್ರಹಿಸಿ, ಸಾಲ ಸೌಲಭ್ಯ ನೀಡಿ ಆರ್ಥಿಕ ಚೇತರಿಕೆಗೆ ದೊಡ್ಡ ಕೊಡುಗೆ ನೀಡುತ್ತಿವೆ.

ಇವುಗಳಲ್ಲಿ ಬಹುತೇಕ ಸಂಘಗಳು ಉತ್ತಮ ಸಾಧನೆ ಮಾಡುವ ಮೂಲಕ ರಾಜ್ಯದಲ್ಲಿ ಮಾದರಿ ಸಹಕಾರ ಸಂಘಗಳಾಗಿ ಗುರುತಿಸಿಕೊಂಡಿವೆ. ವಿವಿಧೋದ್ದೇಶಗಳ ಸಹಕಾರ ಸಂಘಗಳು ನೀಡುವ ಸಾಲ ಸೌಲಭ್ಯದಿಂದ ಸಮಾಜದ ಬಡವ, ಮಧ್ಯಮ ವರ್ಗದ ಜನರು, ನೌಕರಿ ಮಾಡುವವರು, ಗುಡಿ ಕೈಗಾರಿಕೆ ನಡೆಸುವವರು ಆರ್ಥಿಕವಾಗಿ ಚೈತನ್ಯ ಪಡೆದಿದ್ದಾರೆ. ಹೀಗೆ, ವಿವಿಧೋದ್ದೇಶಗಳ ವಲಯ ಹಲವು ವರ್ಗದವರಿಗೆ ಆರ್ಥಿಕವಾಗಿ ನೆರವಾಗುತ್ತಿದೆ. ಅಲ್ಲದೇ ಉದ್ಯೋಗ ಸೃಷ್ಟಿಗೂ ಕಾರಣವಾಗಿದೆ. ಇಂತಹ ಸಂಘಗಳಲ್ಲಿ ವಿಜಯಪುರ ಜಿಲ್ಲೆಯಲ್ಲಿ ಪ್ರಗತಿ ಪಥದಲ್ಲಿ ಸಾಗುತ್ತಿರುವ ಶ್ರೀ ಶಾಂತೇಶ್ವರ ವಿವಿದೋದ್ದೇಶಗಳ ಸಹಕಾರ ಸಂಘ ನಿ., ಹೊರ್ತಿ, ಈ ಸಂಘವು ತನ್ನ ಸದಸ್ಯ ಸೇವೆಗಳ ಮೂಲಕ ಎಲ್ಲರ ಗಮನ ಸೆಳೆಯುತ್ತಿದೆ.

ವಿಶ್ವಗುರು ಬಸವಣ್ಣನವರ ಜನ್ಮಸ್ಥಳ, ನಿಷ್ಕಾಮ ಯೋಗಿ ಸಿದ್ದೇಶ್ವರ ಶ್ರೀಗಳು ಜನಿಸಿದ ಪುಣ್ಯ ಭೂಮಿ, ಗುಮ್ಮಟ ನಗರ – ಐತಿಹಾಸಿಕ ನಗರ–ಸ್ಮಾರಕಗಳ ನಗರ ಎಂದೇ ಕರೆಯಲ್ಪಡುವ ವಿಜಯಪುರ ಜಿಲ್ಲೆ ತನ್ನದೇ ಆದ ಐತಿಹಾಸಿಕ ಶ್ರೀಮಂತಿಕೆಯನ್ನು ಹೊಂದಿದೆ. ವಿಜಯಪುರ ಜಿಲ್ಲೆಯ ಇಂಡಿ ತಾಲೂಕಿನ ಹೊರ್ತಿ ಗ್ರಾಮದಲ್ಲಿ ಸಹಕಾರ ರಂಗದಿಂದಲೇ ಸಮಗ್ರ ಮನುಕುಲದ ಅಭಿವೃದ್ಧಿ ಸಾಧ್ಯ ಎಂಬ ಬಲವಾದ ನಂಬಿಕೆಯೊಂದಿಗೆ ಪ್ರಾರಂಭವಾದ ಸಂಘವೇ ಶ್ರೀ ಶಾಂತೇಶ್ವರ ವಿವಿಧೋದ್ದೇಶಗಳ ಸಹಕಾರ ಸಂಘ. ದಿನಾಂಕ 29–11–2000 ರಂದು ಪ್ರಾರಂಭಿಕ ಹಂತದಲ್ಲಿ

ಕೇವಲ ರೂ. 4 ಲಕ್ಷ ಶೇರು ಬಂಡವಾಳ ಮತ್ತು 300 ಸದಸ್ಯರಿಂದ ಪ್ರಾರಂಭಗೊಂಡ ಸಂಘ ಇಂದು 18 ಸಾವಿರಕ್ಕೂ ಅಧಿಕ ಸದಸ್ಯರೊಂದಿಗೆ ಹೆಮ್ಮರವಾಗಿ ಬೆಳೆದು ರಾಜ್ಯದಲ್ಲಿ ಸಹಕಾರ ಸೇವೆಯಲ್ಲಿ ನಿರತವಾಗುವ ಮೂಲಕ ಸಹಸ್ರಾರು ಜನರಿಗೆ ಆಶಾಕಿರಣವಾಗಿದೆ.

ವಿಜಯಪುರ ಜಿಲ್ಲೆಯ ಹಿರಿಯ ಸಹಕಾರಿ ಮುಖಂಡರು, ಸಂಸ್ಥಾಪಕ ಅಧ್ಯಕ್ಷರು ಹಾಗೂ 'ಸಹಕಾರ ರತ್ನ' ಪ್ರಶಸ್ತಿ ಪುರಸ್ಕೃತರಾದ ಶ್ರೀಮಂತ ಜಗದೇವಪ್ಪ ಇಂಡಿರವರ ಅಧ್ಯಕ್ಷತೆ ಮತ್ತು ಬದ್ಧತೆಯುಳ್ಳ ಆಡಳಿತ ಮಂಡಳಿ ಹಾಗೂ ದಕ್ಷ, ಪ್ರಾಮಾಣಿಕ ಸಿಬ್ಬಂದಿ ವರ್ಗದ ಶ್ರಮದಿಂದ ಸಂಘ ಇಂದು ಪ್ರಗತಿಯ ಪಥದಲ್ಲಿ ಸಾಗಿದೆ.

## ಉದ್ದೇಶ...

ಸಂಘದ ಸದಸ್ಯರಿಗೆ ಸಾಲಗಳನ್ನು ನೀಡುವ ಮೂಲಕ ಅವರ ಜೀವನ ಮಟ್ಟವನ್ನು ವೃದ್ಧಿಸುವುದು. ಸದಸ್ಯರಿಂದ ಶೇರು ಹಣ ಮತ್ತು ವಿವಿಧ ಪ್ರಕಾರಗಳ ಠೇವಣಿಗಳನ್ನು ಸ್ವೀಕರಿಸುವುದು. ಸದಸ್ಯರ ಅವಶ್ಯಕತೆಗಳಿಗುಣವಾಗಿ ವಿವಿಧ ಪ್ರಕಾರದ ವ್ಯವಹಾರ ಮಾಡಲು ಸಾಲ ನೀಡುವುದು. ವಸತಿ ನಿರ್ಮಾಣ ಮಾಡುವುದು. ಉದ್ಯೋಗಕ್ಕಾಗಿ ವಾಹನಗಳನ್ನು ಖರೀದಿ ಮಾಡಲು ಸಾಲ ನೀಡುವುದು. ಕೃಷಿ ಆಧಾರಿತ ಉದ್ದಿಮೆ, ಸ್ವಂತ ಉದ್ದಿಮೆದಾರರಿಗೆ ಹಣಕಾಸು ಪೂರೈಸುವುದು. ಸಮಾಜದಲ್ಲಿ ಆರ್ಥಿಕವಾಗಿ ದುರ್ಬಲರಾಗಿರುವ ಜನರನ್ನು ಸಂಘದ ಸದಸ್ಯರನ್ನಾಗಿಸಿ ಅವರುಗಳನ್ನು ಆರ್ಥಿಕವಾಗಿ, ಸಾಮಾಜಿಕವಾಗಿ ಅಭಿವೃದ್ಧಿಗೊಳಿಸುವ ಯೋಜನೆಗಳನ್ನು ರೂಪಿಸುವುದು. ಸಂಘದ ಸದಸ್ಯರುಗಳ ಮಕ್ಕಳ ಉನ್ನತ ವ್ಯಾಸಂಗಕ್ಕಾಗಿ ಸಾಲ ಒದಗಿಸುವುದು ಸಂಘದ ಪ್ರಮುಖ ಉದ್ದೇಶಗಳಾಗಿವೆ.

ಸಂಘ ಸ್ಥಾಪನೆಗೊಂಡ ಕೇವಲ 10 ವರ್ಷಗಳಲ್ಲಿ ಶ್ರೀ ಶಾಂತೇಶ್ವರ ವಿವಿದೋದ್ದೇಶಗಳ ಸಹಕಾರಿ ಸಂಘದ ಪ್ರಧಾನ ಕಛೇರಿ ಹೊರ್ತಿಯಲ್ಲಿ ಸ್ವಂತ ಕಟ್ಟಡ ಪ್ರಧಾನ ಕಛೇರಿ ಕಟ್ಟಡವನ್ನು ರೂ.3.50 ಕೋಟಿ ವೆಚ್ಚದಲ್ಲಿ 50ಫಿ60 ಅಳತೆಯ ಜಾಗೆಯಲ್ಲಿ ಐದು ಅಂತಸ್ತಿನ ಬೃಹತ್ ಕಟ್ಟಡ ದಿನಾಂಕ 07-09-2008 ರಂದು ಅಂದಿನ ಸಹಕಾರಿ ಸಚಿವರಾದ ಲಕ್ಷ್ಮಣ ಸವದಿ, ಸಚಿವರಾದ ಗೋವಿಂದ ಕಾರಜೋಳ, ಶಾಸಕರು ಹಾಗೂ ಮಹಾಮಂಡಳದ ಅಧ್ಯಕ್ಷರಾದ ಜಿ.ಟಿ. ದೇವೇಗೌಡ ಸೇರಿದಂತೆ ಅನೇಕ ಗಣ್ಯರ ಉಪಸ್ಥಿತಿಯಲ್ಲಿ ಉದ್ಘಾಟನೆ ಮಾಡಲಾಗಿರುತ್ತದೆ.

ವಿಜಯಪುರ ನಗರದಲ್ಲಿ ಸಂಘದ ನೂತನ ಆಡಳಿತ ಕಛೇರಿ ಉದ್ಘಾಟನೆ. ವಿಜಯಪುರ ನಗರದಲ್ಲಿ ರೂ. 12 ಕೋಟಿ ಮೊತ್ತದಲ್ಲಿ 20 ಸಾವಿರ ಚದರ ಅಡಿ ಜಾಗದಲ್ಲಿ ಆರು ಅಂತಸ್ತುಗಳ ಸಂಘದ ನೂತನ ಆಡಳಿತ ಕಛೇರಿ "ಸಹಕಾರ ಸೌಧ" ವನ್ನು ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ನವರು ಹಾಗೂ ನಿಕಟಪೂರ್ವ ಸಹಕಾರ ಸಚಿವರಾದ ಕೆ.ಎನ್. ರಾಜಣ್ಣ ಹಾಗೂ ಸಹಕಾರ ಮಹಾಮಂಡಳದ ಅಧ್ಯಕ್ಷರೂ, ಶಾಸಕರಾದ ಜಿ.ಟಿ. ದೇವೆಗೌಡರ ಸಮ್ಮುಖದಲ್ಲಿ ದಿನಾಂಕ: 20-11-2023 ರಂದು ಲೋಕಾರ್ಪಣೆಗೊಂಡಿದೆ. ವಿಜಯಪುರದಲ್ಲಿ-2004 ರಲ್ಲಿ ವಿಜಯಪುರದ ಚನ್ನಮ್ಮ ನಗರದಲ್ಲಿ ವಿಜಯಪುರ ನಗರಾಭಿವೃದ್ಧಿ ಪ್ರಾಧಿಕಾರದಿಂದ ಇಪ್ಪತ್ತು ಸಾವಿರ ಚದರ ಅಡಿಗಳ ನಿವೇಶನವನ್ನು ಖರೀದಿ ಮಾಡಲಾಗಿರುತ್ತದೆ. ಹೊರ್ತಿಯಲ್ಲಿ ಪ್ರಧಾನ ಕಛೇರಿಯ ಪಕ್ಕದಲ್ಲಿ ಸಂಘಕ್ಕೆ ಮತ್ತೊಂದು 30X40 ನಿವೇಶನವನ್ನು ಸಹ ಖರೀದಿ ಮಾಡಲಾಗಿದೆ.

## ಸೂಪರ್ ಮಾರ್ಕೆಟ್‌ಗಳು :





**ಸಂಘವು ಹೊರ್ತಿ, ಇಂಡಿ, ಮುದ್ದೇಬಿಹಾಳ ಮತ್ತು ನಿಡಗುಂದಿಯಲ್ಲಿ ಸೂಪರ್ ಮಾರ್ಕೆಟ್ ಪ್ರಾರಂಭಿಸಿ ಗ್ರಾಮೀಣ ಜನತೆಗೆ ಅವಶ್ಯಕವಾಗಿರುವ ಎಲ್ಲ ವಸ್ತುಗಳನ್ನು ಅತ್ಯಂತ ಸೂಕ್ತ ಬೆಲೆಗೆ ಪೂರೈಸುತ್ತಿದೆ.**

## ಕಾರ್ಯಕ್ಷೇತ್ರ :

ಪ್ರಾರಂಭದಲ್ಲಿ ಇಂಡಿ ತಾಲೂಕಿಗೆ ಸೀಮಿತವಾಗಿದ್ದ ಕಾರ್ಯಕ್ಷೇತ್ರ ಪ್ರಸ್ತುತ ಸಂಘದ ಕಾರ್ಯವ್ಯಾಪ್ತಿಯು ಕರ್ನಾಟಕ ರಾಜ್ಯದ ಮೈಸೂರು ವಿಭಾಗ ಹೊರತುಪಡಿಸಿ ಬೆಳಗಾವಿ, ಕಲಬುರ್ಗಿ, ಬಾಗಲಕೋಟ ಹಾಗೂ ಬೆಂಗಳೂರು ವಿಭಾಗಗಳಿಗೂ ವಿಸ್ತರಿಸಿದೆ.



## ಕೇಂದ್ರ ಕಛೇರಿ

**ಸಿಬ್ಬಂದಿ ವರ್ಗ :** ಶ್ರೀ ಶಾಂತೇಶ್ವರ ವಿವಿಧೋದ್ದೇಶ ಸಹಕಾರ ಸಂಘವು ತನ್ನ ಕಾರ್ಯವ್ಯಾಪ್ತಿಯಲ್ಲಿ ಒಟ್ಟು 50 ಶಾಖೆಗಳನ್ನು ಹೊಂದಿದೆ. ಪ್ರಾರಂಭದಲ್ಲಿ ಕೇವಲ 3 ಜನ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದ ಈ ಸಂಘದಲ್ಲಿ ಪ್ರಸ್ತುತ ಒಟ್ಟು 327 ಜನ ಸಿಬ್ಬಂದಿ ವರ್ಗ ಕಾರ್ಯನಿರ್ವಹಿಸುತ್ತಿದ್ದಾರೆ ಎಂಬುದು ಶ್ಲಾಘನೀಯ. ಸಂಘ ತನ್ನ ಮೂಲಕ ಅತಿ ಹೆಚ್ಚು ಉದ್ಯೋಗವಕಾಶವನ್ನು ಕಲ್ಪಿಸಿಕೊಡುವ ಮೂಲಕ ಹಲವಾರು ಕುಟುಂಬಗಳಿಗೆ ಆಸರೆಯಾಗಿದೆ.

**ಶಾಖೆಗಳು :** ಪ್ರಧಾನ ಕಚೇರಿ ಹೋರ್ತಿ, ತಾಂಬಾ, ಲಚ್ಯಾಣ, ವಿಜಯಪುರ, ಇಂಡಿ, ಚಡಚಣ, ಭತಗುಣಕಿ, ಮುದ್ದೇಬಿಹಾಳ, ನಿಡಗುಂದಿ, ಸಾಲೋಟಗಿ, ಗೊಲಗೇರಿ, ಕಲಕೇರಿ, ಮನಗೂಳಿ, ಸಾವಳಗಿ, ತೊದಲಬಾಗಿ, ತೆಲಸಂಗ, ದೇವರ ಹಿಪ್ಪರಗಿ, ಸಿಂದಗಿ, ಬಸವನ ಬಾಗೇವಾಡಿ, ತಾಳಿಕೋಟಿ, ಮುಳವಾಡ, ಆಲಮೇಲ, ಮುಗಳಖೋಡ, ಹುನ್ನೂರ, ಬನಹಟ್ಟಿ, ಇಲಕಲ, ಹುನಗುಂದ, ತೇರದಾಳ, ಗದ್ದನಕೇರಿ ಕ್ರಾಸ್, ಜಮಖಂಡಿ, ಮುಧೋಳ, ಮಹಾಲಿಂಗಪುರ, ಲೋಕಾಪುರ, ಜೇವರ್ಗಿ, ಶಹಬಾದ, ಚಿತ್ತಾಪುರ, ಶಹಾಪೂರ, ಹುಣಸಗಿ, ಕೆಂಭಾವಿ, ಕೊಡೆಕಲ್, ಯಡ್ರಾಮಿ, ಅಫಜಲಪೂರ, ಕರಜಗಿ, ಘತ್ತರಗಿ, ಮಣ್ಣೂರ, ಗಾಣಗಾಪೂರ, ಕೆ.ಸಿ.ನಗರ ವಿಜಯಪುರ, ಸೆಡಂ, ಕಾಳಗಿ.

## ಸಂಘವು ಪಡೆದ ಪ್ರಶಸ್ತಿಗಳು...

2004–05ರಲ್ಲಿ ಅಖಿಲ ಭಾರತ ಸಹಕಾರಿ ಸಪ್ತಾಹದಲ್ಲಿ ಉತ್ತಮ ಸಹಕಾರಿ ಸಂಘವೆಂದು ಪ್ರಶಸ್ತಿ ಪಡೆಯಲಾಗಿದೆ. 2007–08ರಲ್ಲಿ ಬಾಗಲಕೋಟ ಜಿಲ್ಲೆ ಕೂಡಲಸಂಗಮದಲ್ಲಿ ಜರುಗಿದ ರಾಜ್ಯ ಮಟ್ಟದ ಸಹಕಾರಿ ಸಪ್ತಾಹ ಶತಮಾನೋತ್ಸವ ಕಾರ್ಯಕ್ರಮದಲ್ಲಿ ಅತ್ಯುತ್ತಮ ಸಹಕಾರಿ ಪ್ರಶಸ್ತಿ ಪಡೆಯಲಾಗಿದೆ. 2016–17ರಲ್ಲಿ ಬಾಗಲಕೋಟದಲ್ಲಿ ಜರುಗಿದ ರಾಜ್ಯ ಮಟ್ಟದ 64ನೇ ಅಖಿಲ ಭಾರತ ಸಹಕಾರಿ ಸಪ್ತಾಹದಲ್ಲಿ ಅತ್ಯತ್ತಮ ಸಹಕಾರಿ ಪ್ರಶಸ್ತಿ. 2019–20ರಲ್ಲಿ ವಿಜಯಪುರದ ಜರುಗಿದ ರಾಜ್ಯ ಮಟ್ಟದ 67ನೇ ಅಖಿಲ ಭಾರತ ಸಹಕಾರಿ ಸಪ್ತಾಹದಲ್ಲಿ ಅತ್ಯತ್ತಮ ಸಹಕಾರಿ ಪ್ರಶಸ್ತಿ, 2005–06ನೇ ಸಾಲಿನ ಉತ್ತಮ ಕಾರ್ಯನಿರ್ವಹಣೆಗಾಗಿ ವಿಜಯಪುರ ಜಿಲ್ಲೆಯ ಪತ್ತಿನ ಸಹಕಾರಿ ಸಂಘಗಳ ವಿಭಾಗದಲ್ಲಿ ಪ್ರಥಮ ಸ್ಥಾನ ಹಾಗೂ 2006–07, 2007–08, 2010–11, 2011–12, 2012–13, 2013–14, 2014–15, 2015–16, 2016–17, 2017–18, 2018–19, 2019–20, 2020–21, 2021–22, 2022–23, 2023–24 ಮತ್ತು 2024–25ನೇ ಸಾಲಿನಲ್ಲಿ ಉತ್ತಮ ಕಾರ್ಯನಿರ್ವಹಣೆಗೆ ಸತತವಾಗಿ ಪ್ರಥಮ ಸ್ಥಾನಕ್ಕೆ ಆಯ್ಕೆಗೊಂಡು ಡಿಸಿಸಿ ಬ್ಯಾಂಕ್ ವಿಜಯಪುರ ಇವರಿಂದ ಪ್ರಶಸ್ತಿ ಹಾಗೂ ನಗದು ಬಹುಮಾನ ಪಡೆಯಲಾಗಿದೆ.

2024–25ರ ಸಾಲಿನ ಇಂಡಿಯಲ್ಲಿ ನಡೆದ ಸಹಕಾರಿ ಸಪ್ತಾಹ ಕಾರ್ಯಕ್ರಮದಲ್ಲಿ ಅತ್ಯುತ್ತಮ ಕಾರ್ಯನಿರ್ವಹಣೆಗಾಗಿ ವಿಜಯಪುರ ಜಿಲ್ಲಾ ಸಹಾರಿ ಯುನಿಯನ ವತಿಯಿಂದ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

| ಸಂಘದ ಮಾರ್ಚ್ 31, 2025 ಆರ್ಥಿಕ ಪಕ್ಷಿ ನೋಟ(ರೂ. ಲಕ್ಷಗಳಲ್ಲಿ) | |
|---|---|
| ವಿವರ | 31–03–2025 |
| ಸದಸ್ಯರ ಸಂಖ್ಯೆ | 18452 |
| ಶೇರು ಬಂಡವಾಳ | 17,19,42,300 |
| ನಿಧಿಗಳು | 20,58,55,401 |
| ಠೇವುಗಳು | 171,73,34,080 |
| ಸಾಲಗಳು | 152,60,14,513 |
| ದುಡಿಯುವ ಬಂಡವಾಳ | 228,68,25,816 |
| ನಿವ್ವಳ ಲಾಭ | 4,31,44,913 |

## ಆಡಳಿತ ಕಛೇರಿಯ ಲೋಕಾರ್ಪಣೆ



ದಿನಾಂಕ : 20–11–2023 ರಂದು ವಿಜಯಪುರದ ಕೆ.ಸಿ. ನಗರದಲ್ಲಿರುವ ನೂತನ ಆಡಳಿತ ಕಛೇರಿ "ಸಹಕಾರ ಸೌಧ" ಕಟ್ಟಡವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯನವರ ಅಮೃತ ಹಸ್ತದಿಂದ, ಸಹಕಾರ ಸಚಿವರಾದ ಕೆ.ಎನ್.ರಾಜಣ್ಣ, ಸಚಿವರಾದ ಎಂ.ಬಿ. ಪಾಟೀಲ್, ಶಿವಾನಂದ ಎಸ್. ಪಾಟೀಲ್, ಶಾಸಕರು ಹಾಗೂ ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷರಾದ ಜಿ.ಟಿ. ದೇವೇಗೌಡ ಸೇರಿದಂತೆ ಸಹಕಾರಿಗಳ ಸಮ್ಮುಖದಲ್ಲಿ ಲೋಕಾರ್ಪಣೆಗೊಳಿಸಲಾಗಿದೆ.

# ಶಿವ ಎಂಬ ಎರಡಕ್ಷರ ಮೋಕ್ಷಕ್ಕೆ ದಾರಿ ಕೈಲಾಸವಾಸಿ ಶಿವನಿಗೆ ಶಿವರಾತ್ರಿ ಅತ್ಯಂತ ಪ್ರಿಯವಾದ ದಿನ

ಶಿವ ವೈವಿಧ್ಯಮಯ ದೇವತೆ. ಸುಲಭವಾಗಿ ಒಲಿಯುವ ಶಿವನಿಗೆ ಅಸುರ ಭಕ್ತರ ಸಂಖ್ಯೆ ಹೆಚ್ಚು. ಹಾಗೆಯೇ ನಂಜುಂಡನಾದ ಶಿವ ಮಹಾ ಲೋಕೋಪಕಾರಿ. ಲಯಕರ್ತನಾದ ಈತನನ್ನು ಮಹಾಮಹಿಮ ಎಂದು ಕರೆಯುವಾಗ ಅದರಲ್ಲಿ ಹೊಗಳಿಕೆಯಷ್ಟೇ ವ್ಯಂಗ್ಯವೂ ಬೆರೆತಿರುತ್ತದೆ. ಏಕೆಂದರೆ ಶಿವನು ವರಕೊಡುವ ಭರದಲ್ಲಿ ಅದೆಷ್ಟೋ ಎಡವಟ್ಟುಗಳನ್ನು ಮಾಡಿಬಿಟ್ಟಿರುತ್ತಾನೆ! ಶಿವಪುರಾಣದಲ್ಲಿ ಶಿವನ ಕುರಿತಾದ ಸ್ವಾರಸ್ಯಕರ ಕಥೆಗಳಿವೆ. ಶಿವ ಸ್ವಯಂಭೂ ಎನ್ನುವ ಈ ಪುರಾಣವು ಆತನ ಹಾಗೂ ಆತನ ಭಕ್ತರ ಸಾಹಸಗಳಾನ್ನು ಸೊಗಸಾಗಿ ವರ್ಣಿಸುತ್ತವೆ. ಇಲ್ಲಿ ಶಿವನಿಗೆ ಸಂಬಂಧಿಸಿದ ಕೆಲವು ಕಥೆಗಳನ್ನು ಸಂಸ್ಕೃತಿ ಚಿಂತಕ ಡಾ.ಗುರುರಾಜ ಪೋಶೆಟ್ಟಿಹಳ್ಳಿ ನಿರೂಪಿಸಿದ್ದಾರೆ.

**ಭೋಲೇ ಶಂಕರ :** ಶಿವನ ಸ್ವಭಾವ ಹಸುಗೂಸಿನದು ಎನ್ನುತ್ತವೆ ಪುರಾಣಗಳು. ಅವನನ್ನು ಭಕ್ತರು ಬಹಳ ಸುಲಭವಾಗಿ ಒಲಿಸಿಕೊಳ್ಳುತ್ತಾರೆ, ತಮ್ಮ ತಾಳಕ್ಕೆ ತಕ್ಕಂತೆ ಕುಣಿಸುತ್ತಾರೆ. ಹಿಂದಿಯಲ್ಲಿ ಭೋಲೇ ಎಂದರೆ ಮುಗ್ಧ ಎಂದರ್ಥ. ಆದ್ದರಿಂದ ಶಿವನಿಗೆ ಭೋಲೇಶಂಕರ ಎಂಬ ಹೆಸರು ಅನ್ವರ್ಥವಾಗಿ ಬಂದಿದೆ.

**ಆಶುತೋಷ :** ಆಶುತೋಷ ಎಂದರೆ ತತ್‌ಕ್ಷಣದಲ್ಲಿ ಸಂತುಷ್ಟಿ ಹೊಂದುವಂತಹವನು. ಆಶುಕವಿತೆ ಎಂಬ ಪದವನ್ನು ನೆನೆದುಕೊಳ್ಳಿ. ತತ್‌ಕ್ಷಣ ಬರೆದುಕೊಡುವ ಕವಿತೆ ಆಶುಕವಿತೆಯಾಗುವಂತೆ, ಆ ಕೂಡಲೇ–ತಪಸ್ಸು ಮಾಡಿ ಕರೆದ ಕೂಡಲೇ ಪ್ರತ್ಯಕ್ಷನಾಗಿ ಕೇಳಿದ ವರಕೊಡುವವನು ಆಶುತೋಷ.

**ಭಿಕ್ಷಾನ್ನದ ಭೈರಾಗಿ :** ಲಯಕರ್ತನಾದ ಶಿವನು ಬ್ರಹ್ಮನ ಐದನೇ ಮುಖವನ್ನು ಕೀಳಲು ಹೋಗುತ್ತಾನೆ. ಆ ಕಪಾಲವು ಶಿವನ ಕೈಯನ್ನೇ ಕಚ್ಚಿ ಹಿಡಿಯುತ್ತದೆ. ಏನು ಮಾಡಿದರೂ ಹೋಗುವುದಿಲ್ಲ. ಕೊನೆಗೆ, ಈ ಕಪಾಲವನ್ನು ಹಿಡಿದು ಭಿಕ್ಷೆ ಬೇಡುತ್ತಾ ಹೋಗು. ಯಾವತ್ತು ಅದು ತುಂಬುವುದೋ ಅವತ್ತು ಕಪಾಲವು ಕೈಬಿಡುತ್ತದೆ ಎನ್ನುತ್ತಾನೆ ಬ್ರಹ್ಮ ಅದರಂತೆ ಶಿವ ಊರೂರು ಅಲೆಯುತ್ತ ಭಿಕ್ಷೆ ಬೇಡುತ್ತಾನೆ. ಕೊನೆಗೂ ಅನ್ನಪೂರ್ಣೆಯಾದ ಪಾರ್ವತಿಯ ಕೈಯಿಂದ ಭಿಕ್ಷೆ ಸ್ವೀಕರಿಸಿದಾಗ ಬ್ರಹ್ಮ ಕಪಾಲ ತುಂಬಿ, ಶಿವನ ಕೈಬಿಡುತ್ತದೆ.

**ಶಿವನ ಮೂಲ :** ಒಮ್ಮೆ ಬ್ರಹ್ಮ ಮತ್ತು ವಿಷ್ಣು ಶಿವನ ಮೂಲದ ಬಗ್ಗೆ ಚರ್ಚೆ ನಡೆಸುತ್ತಾರೆ. ಯಾರು ಅವನ ಮೂಲವನ್ನು ಹುಡುಕುತ್ತಾರೋ ಅವರೇ ಶಕ್ತಿವಂತರೆಂದು ಒಪ್ಪಿಕೊಳ್ಳಬೇಕೆಂಬ ಕರಾರು ಮಾಡಿಕೊಂಡು ಬ್ರಹ್ಮನು ತನ್ನ ವಾಹನದ ಹಂಸದ ಮೇಲೆ ಕುಳಿತು ಮೇಲಕ್ಕೂ, ವಿಷ್ಣುವು ವರಹಾ ರೂಪತಾಳಿ ಪಾತಾಳಕ್ಕೂ ಹೋಗುತ್ತಾರೆ. ಇಬ್ಬರಿಗೂ



ಶಿವನು ಗೋಚರವಾಗುವುದಿಲ್ಲ. ಬ್ರಹ್ಮ ನಿರಾಶನಾಗಿ ಹಿಂದಿರುಗುವ ಹೊತ್ತಿಗೆ ಕೇದಗೆಯ ದಳವೊಂದು ಕೆಳಗೆ ಬೀಳುತ್ತಿರುತ್ತದೆ. ಬ್ರಹ್ಮ ಚಕಿತನಾಗಿ ನೀನೆಲ್ಲಿಂದ ಬರುತ್ತಿರುವೆ ಎನ್ನುತ್ತದೆ. ಆಗ ಬ್ರಹ್ಮ ಶಿವನ ಸ್ಥಳ ತಿಳಿಸುವಂತೆ ಕೇಳುತ್ತಾನೆ. ಅದನ್ನು ಹೇಳಬಾರದೆಂಬ ಸೂಚನೆ ಇದ್ದರೂ ಕೇದಗೆಯು ಶಿವನಿರುವ ತಾಣದಗುಟ್ಟು ಬಿಟ್ಟುಕೊಡುತ್ತದೆ. ಬ್ರಹ್ಮನಲ್ಲಿಗೆ ತಲುಪಿ ತಾನು ಗೆದ್ದೆ ಎನ್ನುತ್ತಾನೆ. ಆದರೆ ಈ ಮೋಸವು ಶಿವನಿಗೆ ತಿಳಿದು, ಬ್ರಹ್ಮನ ಮೂರ್ತಿಗೆ ಎಲ್ಲೂ ಪೂಜೆ ಸಲ್ಲದಿರಲಿ ಎಂದು ಶಾಪ ನೀಡುತ್ತಾನೆ. ಹಾಗೆಯೇ ಗುಟ್ಟುರಟ್ಟು ಮಾಡಿದ ಕೇದಕೆಗೆ ತನ್ನ ಪೂಜೆಗೆ ಇನ್ನೆಂದಿಗೂ ನೀನು ಸಲ್ಲುವಂತಿಲ್ಲ ಎಂದು ಶಪಿಸುತ್ತಾನೆ. ಆದ್ದರಿಂದಲೇ ಬ್ರಹ್ಮದೇವರ ಮೂರ್ತಿಗಳು ದೇವಾಲಯದಲ್ಲಿ ಪೂಜೆಗೊಳ್ಳುವುದಿಲ್ಲ. ಹಾಗೆಯೇ ಕೇದಗೆಯನ್ನು ಶಿವನ ಪೂಜೆಗೆ ಬಳಸಲಾಗುವುದಿಲ್ಲ ಎಂಬ ನಂಬಿಕೆಗಳು ಚಾಲ್ತಿಯಲ್ಲಿವೆ.

**ನೀಲಕಂಠನಾಗಿದ್ದು :** ಒಮ್ಮೆ ದೇವತೆಗಳು ಮತ್ತು ಅಸುರರು ಸೇರಿ ಸಮುದ್ರ ಮಥನಕ್ಕೆ ತೊಡಗುತ್ತಾರೆ. ಮಂದಾರ ಪರ್ವತವನ್ನೇ ಹಿಡಿದು ಕ್ಷೀರಸಾಗರವನ್ನು ಕಡೆಯಲು ಹೊರಟಾಗ ಮೊದಲಲ್ಲಿ ಪರ್ವತ ಸಮುದ್ರದಲ್ಲಿ ಮುಳುಗತೊಡಗುತ್ತದೆ. ಆಗ ತ್ರಿಮೂರ್ತಿಗಳಲ್ಲಿ ಒಬ್ಬನಾದ ವಿಷ್ಣು ಕೂರ್ಮಾವತಾರ ತಾಳಿ ಮಂದಾರ ಪರ್ವತದ ಅಡಿಭಾಗಕ್ಕೆ ತೆರಳಿ ಆಧಾರವಾಗಿ ನಿಲ್ಲುತ್ತಾನೆ. ಸಮುದ್ರ ಮಥನ ಮುಂದುವರಿದಂತೆ ಮೊದಲು ಸಿಕ್ಕಿದ್ದು ಕಾಲಕೂವೆಂಬ ವಿಷ. ಇದನ್ನು ನೋಡಿ ದೇವತೆಗಳು, ರಾಕ್ಷಸರು ಎಲ್ಲರೂ ಭಯಭೀತರಾಗುತ್ತಾರೆ. ಕಾರಣ, ಈ ವಿಷ ಬಲು ತೀಕ್ಷ್ಣವಾದ ಹಾಲಾಹಕವಾಗಿದ್ದು, ಅದು ಇಡೀ ಜೀವ ಸಂಕುಲವನ್ನೇ ನಾಶ ಮಾಡುವ ಸಾಧ್ಯತೆ

ಉಳ್ಳದ್ದಾಗಿರುತ್ತದೆ. ಆಗ ವಿಷ್ಣುವಿನ ಸಲಹೆಯಂತೆ ದೇವತೆಗಳೆಲ್ಲ ಪರಶಿವನ ಬಳಿ ತೆರಳಿ ತಮ್ಮನ್ನು ರಕ್ಷಿಸುವಂತೆ ಕೋರುತ್ತಾರೆ. ಜಗತ್ತನ್ನು ಉಳಿಸುವ ಉದ್ದೇಶದಿಂದ ಈಶ್ವರನು ಆ ವಿಷವನ್ನೆತ್ತಿ ಕುಡಿಯುತ್ತಾನೆ. ಆಗ ಪಾರ್ವತಿಯು ವಿಷವು ದೇಹದ ಇತರ ಭಾಗಗಳಿಗೆ ಹರಡದಂತೆ ಗಂಟಲನ್ನು ಒತ್ತಿ ಹಿಡಿಯುತ್ತಾಳೆ. ಆದ್ದರಿಂದ ವಿಷವು ಗಂಟಲಿನಲ್ಲಿಯೇ ಉಳಿಯುತ್ತದೆ. ಕಠೋರವಾದ ಆ ವಿಷವನ್ನು ಇರಿಸಿಕೊಂಡಿದ್ದರಿಂದ ಶಿವನ ಗಂಟಲು ನೀಲಿ ಬಣ್ಣಕ್ಕೆ ತಿರುಗುತ್ತದೆ. ಅಂದಿನಿಂದ ಶಿವನು 'ನೀಲಕಂಠ' ಎನ್ನಿಸಿಕೊಳ್ಳುತ್ತಾನೆ.

**ಹೆಂಡತಿಯನ್ನೇ ಕೊಟ್ಟವನು! :** ಶಿವನು ತನ್ನ ಭಕ್ತರು ಕೇಳಿದ ವರಗಳನ್ನು ನಿರಾಕರಿಸುವವನೇ ಅಲ್ಲ. ಅವನ ಈ ಗುಣವನ್ನು ದುರುಪಯೋಗಪಡಿಸಿಕೊಳ್ಳುವ ರಾವಣನು ಒಮ್ಮೆ ಶಿವನ ಪತ್ನಿಯನ್ನೇ ತನಗೆ ನೀಡಬೇಕೆಂದು ಕೇಳುತ್ತಾನೆ. ಹಿಂದೆ ಮುಂದೆ ನೋಡದ ಶಿವ ತಥಾಸ್ತು ಎಂದು ಬಿಡುತ್ತಾನೆ. ದುಃಖಿತಳಾಗುವ ಪಾರ್ವತಿಯು ಪತಿಗೆ ಮರು ಮಾತಾಡದೆ ರಾವಣನ ಹಿಂದೆ ಹೊರಡುತ್ತಾಳೆ. ಆಗ ನಾರದರು ಅಡ್ಡ ಸಿಕ್ಕು, ಕಾಳಿಯ ರೂಪ ತಾಳುವಂತೆ ಉಪಾಯ ಹೇಳುತ್ತಾರೆ. ಅವಳು ಅದರಂತೆ ಕಾಳಿಯಾಗಿ ದೈತ್ಯದೇಹ ಹೊಂದುತ್ತಾಳೆ. ಇತ್ತ ನಾರದರು ಪಾರ್ವತಿ ಎಂದು ತಿಳಿದುಕೊಂಡು ಭೂತಗಣವನ್ನು ಕರೆದೊಯ್ಯುತ್ತಿರುವೆಯಲ್ಲಾ! ಎಂದು ರಾವಣನನ್ನು ಛೇಡಿಸುತ್ತಾರೆ. ರಾವಣನು ತಿರುಗಿ ನೋಡಿದಾಗ ಕಾಳಿಯನ್ನು ಕಂಡು ಭೀತಿ ಹಾಗೂ ಜಿಗುಪ್ಸೆಗಳಿಂದ ಅವಳನ್ನಲ್ಲಿಯೇ ಬಿಟ್ಟು ಓಡಿಹೋಗುತ್ತಾನೆ! ಹೀಗೆ ಪಾರ್ವತಿಯು ಶಿವನ ತಂದಿತ್ತ ಫಜೀತಿಯಿಂದ ಪಾರಾಗುತ್ತಾಳೆ.

**ಜಿತ ಕಾಮ :** ಶಿವ ಪತ್ನಿಯಾಗಿದ್ದ ದಾಕ್ಷಾಯಣಿ ದಕ್ಷ ಯಜ್ಞದಲ್ಲಿ ಆತ್ಮಾಹುತಿ ಮಾಡಿಕೊಳ್ಳುತ್ತಾಳೆ. ಶಿವನನ್ನು ತನ್ನ ತಂದೆ ನಿಂದಿಸಿದ್ದೇ ಇದಕ್ಕೆ ಕಾರಣವಾಗಿರುತ್ತದೆ. ಇದರಿಂದ ನೊಂದ ಶಿವ, ಪತ್ನಿಯ ಅಗಲಿಕೆ ತಾಳಲಾರದೆ ಗಾಢಧ್ಯಾನಕ್ಕೆ ಕುಳಿತು ಬಿಡುತ್ತಾನೆ. ದಾಕ್ಷಾಯಣಿಯು ಪರ್ವತರಾಜನ ಪತ್ನಿ ಮೇನೆಕೆಯಲ್ಲಿ ಜನಿಸಿ ಪಾರ್ವತಿ ಎಂಬ ಹೆಸರು ತಾಳುತ್ತಾಳೆ. ಶಿವನನ್ನೇ ವರಿಸಬೇಕೆನ್ನುವುದು ಅವಳ ಜೀವನಧ್ಯೇಯವಾಗಿರುತ್ತದೆ. ಅದಕ್ಕೆ ಪೂರಕವಾಗಿ ರಾಕ್ಷಸನೊಬ್ಬ ಶಿವನು ಹೇಗಿದ್ದರೂ ಧ್ಯಾನಸ್ಥ, ಮದುವೆಯಾಗಿ ಸಂತಾನ ಹೊಂದುವುದು ಕನಸಿನ ಮಾತೆಂದು ಬಗೆದು, ಶಿವಪುತ್ರನಿಂದಲೇ ತನಗೆ ಸಾವು ಬರಲೆಂದು ಕೇಳಿಕೊಳ್ಳುತ್ತಾನೆ.

ಆದ್ದರಿಂದ ಶಿವ–ಪಾರ್ವತಿಯರ ಮದುವೆ ಆದಷ್ಟು ಬೇಗ ನಡೆಯಬೇಕಾದ ತುರ್ತು ಒದಗುತ್ತದೆ. ಪಾರ್ವತಿಯು ಶಿವನನ್ನು ಒಲಿಸಿಕೊಳ್ಳಲು ವ್ರತ ಪಾಲಿಸುತ್ತಾ ನಿತ್ಯವೂ ಶಿವನ ಸೇವೆಗೆ ಅವನ ತಾಣಕ್ಕೆ ಹೋಗುತ್ತಿರುತ್ತಾಳೆ. ಇಂತಹ ಒಂದು ದಿನ ಕಾಮನು ಶಿವನ ಮೇಲೆ ಪುಷ್ಪಬಾಣ ಪ್ರಯೋಗಿಸಿ ತಪೋಭಂಗವಾಗಿ ಪಾರ್ವತಿಯನ್ನು ಕಾಮಿಸುವಂತೆ ಮಾಡಲು ಯತ್ನಿಸುತ್ತಾನೆ. ಆದರೆ ಧ್ಯಾನಭಂಗದಿಂದ ಕೋಪಗೊಳ್ಳುವ ಶಿವನು ಹಣೆಗಣ್ಣು ತೆರೆದು ಕಾಮನನ್ನು ಸುಟ್ಟುಹಾಕುತ್ತಾನೆ. ಹೀಗೆ ಕಾಮನ ಪ್ರಯೋಗಕ್ಕೆ ಒಳಗಾಗದೆ ಗೆದ್ದ ಶಿವನನ್ನು ಜಿತಕಾಮ ಎಂದು ದೇವತೆಗಳೂ ಕೊಂಡಾಡಿ, ಆನಂತರ ಪಾರ್ವತಿಯನ್ನು ಮದುವೆಯಾಗುವಂತೆ ಮನವೊಲಿಸುತ್ತಾರೆ. ಶಿವನು ಕಾಮನ ಚೇಷ್ಟೆಯನ್ನು ಮನ್ನಿಸಿ ಆತನಿಗೆ ಅನಂಗ ಎಂದು ಹೆಸರಿತ್ತು, ರತಿಗೆ ಮಾತ್ರ ಸಶರೀರಿಯಾಗಿ ಕಾಣುವಂತೆ ವರ ನೀಡುತ್ತಾನೆ.

**ಶಿವರಾತ್ರಿಯಲ್ಲಿ ಸತ್ಕಾರ್ಯ :** ಎಲ್ಲೆಲ್ಲೂ ಶಿವರಾತ್ರಿ ಸಂಭ್ರಮ. ಭಕ್ತರಿಗೆ ಕೋರಿಕೆಗಳನ್ನು ಮಂಡಿಸಲು ಮತ್ತೊಂದು ಅವಕಾಶ. ಆದರೆ ಎಲ್ಲ ಭಕ್ತರು ಭಕ್ತರೆ? ಊಹೂಂ. ಸರ್ಕಾರಕ್ಕೆ ಫ್ರೀಸೈಟಿಗಾಗಿ ಅರ್ಜಿ ಸಲ್ಲಿಸುವವರು ಕ್ಯೂ ನಿಲ್ಲುವಂತೆ ದೇಗುಲದ ವಿಗ್ರಹಗಳ ಮುಂದೆ 'ಅರ್ಜಿಯನ್ನು ತಂದಿರುವೆವು ಅದಕು ಇದಕು ಎದಕು' ಎನ್ನುತ್ತ ನಿಂತಿರುತ್ತಾರೆ. 'ನೀನ್ಯಾಕೋ ನಿನ್ನ ಹಂಗ್ಯಾಕೋ... ನಿನ್ನ ನಾಮದ ಬಲ ಒಂದಿದ್ದರೆ ಸಾಕೋ...' ಎನ್ನುವ ಧೋರಣೆ ಇರುವ ಭಕ್ತನನ್ನು ಸ್ಯಾಂಪಲ್‌ಗಾದರೂ ಕಾಣೆ. ಶಿವನೇ ಮಸಣದಲ್ಲಿದ್ದರೂ 'ನನಗೊಂದು ಸೈಟ್ ಕೊಡಿಸು ದೇವ' ಎನ್ನು ಅರ್ಜಿ; 'ಮಸಣದ ಬೂದಿಯ ಮೈಗೆ ಬಳಿದು ಶಿವ ಎಲ್ಲೆಲೂ ತಿರು ತಿಂಬುವನಂತೆ' ಎಂದು ಹಾಡುತ್ತಲೇ 'ನಾನೂ ತಿರುಗಿ, ತಿಂಬಲು ಒಂದು ಮರ್ಸಿಡಿಸ್ ಕಾರ್ ಪಡೆವ ವರ ನೀಡುತಂದೆ' ಎನ್ನುವುದು; ಯೋಗಭಂಗಿಯಲ್ಲಿ ಕುಳಿತ ಶಿವನನ್ನು ಕಂಡೂಯೋಗ, ವ್ಯಾಯಾಮ, ಚಟುವಟಿಕೆಗಳತ್ತ ಗಮನ ಹರಿಸದೆ, ಕುಳಿತಲ್ಲಿಂದಲೇ 'ಆರೋಗ್ಯ ಕೊಡುತಂದೆ' ಎಂದು ಬೇಡುವ ಪರಿ.. ಒಂದೇ, ಎರಡೇ... ಮನಃಶುದ್ಧಿ, ದೇಹಶುದ್ಧಿ, ಸುವಿಚಾರ ಚಿಂತನೆ, ಸುಸಂಕಲ್ಪ, ಪರಿಶ್ರಮ, ಸುವ್ಯವಹಾರಗಳೆಂಬ ಆರು ಅಂಶಗಳನ್ನು ಸಾಧಿಸಿ. ಫಲಾಫಲಾಗಳನ್ನು ಕಾಣದಕೈಯ ಮರ್ಜಿಗೆ ಬಿಡು ಎನ್ನುವ 'ಷಟ್ಕಾರ್ಯಂ ಮನುಷ್ಯಾಣಾಂ.ಸಪ್ತಮಂ ದೈವಚಿಂತನಂ' ಎಂಬ ಮಾತನ್ನು ಅನುಸರಿಸಿರುವ ಭಕ್ತರ ಸಂಖ್ಯೆ ಬೆರಳೆಣಿಕೆಯಷ್ಟೆ. ಅಷ್ಟೈಶ್ವರ್ಯವನ್ನು ಶಿವ ಅವೆಲ್ಲವನ್ನೂ ಧಿಕ್ಕರಿಸಿ ಕುಳಿತಿರುವಾಗ 'ಅತುಳೈಶ್ವರ್ಯವನ್ನು ನೀಡು ಜಗದೀಶ' ಎನ್ನುವ ಕೋರಿಕೆ ಸಲ್ಲಿಸುವುದು ತರವೆ? ಶಿವನ ಮಾರ್ಗ ತ್ಯಜಿಸುವಿಕೆಯದು, ಗಳಿಸುವಿಕೆಯದಲ್ಲ. ಐಹಿಕವಾದುದನ್ನು ತ್ಯಜಿಸಿ, ಅಲೌಕಿಕವಾದುದನ್ನು ಗಳಿಸುವುದು ಭಕ್ತರ ಉದ್ದೇಶವಾಗಬೇಕು. 'ಉಸಿರಾಡಲು ಗಾಳಿ, ಕುಡಿಯಲು ನೀರು, ಇರಲೊಂದು ಭೂಮಿ. ವಿಫುಲವಾದ ಆಹಾರವನ್ನು ಕೊಟ್ಟವನನ್ನು ಮತ್ತೂ ಬೇಡಬೇಕೆ? ಕೊಟ್ಟಿದ್ದನ್ನೂ ಸರಿಯಾಗಿ ದುಡಿಸಿಕೊಂಡರೆ ದಿನವೂ ಸ್ವರ್ಗವೇ. ದಿನವೂ ದೇವನಿಗೆ ನಾನು ಹೇಳುವುದಿಷ್ಟೆ ನಿನ್ನೆ ಮಲಗಿರುವಾಗಲೇ ನನ್ನ ಅಯುಷ್ಯ ಪೂರ್ಣಗೊಳ್ಳದೆ ಇಂದಿನ ದಿನವನ್ನು ನೋಡಲು ಅವಕಾಶ ಕೊಟ್ಟಿರುವ ನಿನಗೊಂದು ಥ್ಯಾಂಕ್ಸ್ ಎನ್ನುತ್ತೇನೆ' ಶಿವರಾತ್ರಿ ಇಂತಹ ಚಿಂತನೆಗಳನ್ನು ವರ್ಧಿಸಲೆಂದು ಹಾರೈಸೋಣ.